# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ನವೆಂಬರ್ 21, 2020

ಸಂಪುಟ : 47 ಸಂಚಿಕೆ : 201 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com


## ಜ.26ರಂದು ನೂತನ ರೈಲ್ವೆ ಕಟ್ಟಡ ಉದ್ಘಾಟನೆ: ಸಿದ್ದೇಶ್ವರ



**ಅಶೋಕ ಟಾಕೀಸ್ ಬಳಿ ಕಿರು ಕೆಳ ಸೇತುವೆ ನಿರ್ಮಾಣ ಆರಂಭ**

ದಾವಣಗೆರೆ, ನ. 20 - ಮುಂಬರುವ ಜನವರಿ 26ರಂದು ರೈಲ್ವೆ ನಿಲ್ದಾಣದ ನೂತನ ಕಟ್ಟಡ ಉದ್ಘಾಟನೆಯಾಗಲಿದೆ ಹಾಗೂ ಅಶೋಕ ಟಾಕೀಸ್ ರೈಲ್ವೆ ಕ್ರಾಸಿಂಗ್ ಸಮಸ್ಯೆ ಬಗೆಹರಿಸಲು ಕಿರು ಕೆಳ ಸೇತುವೆಯ ಕಾಮಗಾರಿ ಆರಂಭವಾಗಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ರೈಲ್ವೆ ಕಾಮಗಾರಿಗಳ ಪ್ರಗತಿ ಕುರಿತು ಪರಿಶೀಲನಾ ಸಭೆ ನಡೆಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ರೈಲ್ವೆ ನಿಲ್ದಾಣ ನಿರ್ಮಾಣದ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಒಳಾವರಣದ ಕೆಲಸಗಳನ್ನು ಕೈಗೊಳ್ಳಲಾಗುತ್ತಿದೆ. ಎರಡು ಎಸ್ಕಲೇಟರ್‌ಗಳನ್ನು ಪ್ರಯಾಣಿಕರಿಗಾಗಿ ಅಳವಡಿಸಲಾಗುತ್ತಿದೆ ಎಂದು ತಿಳಿಸಿದರು.

ಅಶೋಕ ಟಾಕೀಸ್ ಬಳಿಯ ರೈಲ್ವೆ ಕ್ರಾಸಿಂಗ್‌ನಲ್ಲಿ ಲಿಂಗೇಶ್ವರ ದೇವಸ್ಥಾನದ ರಸ್ತೆಯಲ್ಲಿ ಒಂದು ಕಿರು ಕೆಳ ಸೇತುವೆಯನ್ನು ನಿರ್ಮಿಸಲಾಗುತ್ತಿದೆ. ಇದು ಕಾರು ಹಾಗೂ ಸಣ್ಣ ವಾಹನಗಳಿಗೆ ಸಾಕಾಗಲಿದೆ. ಎರಡು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಇದು 2.75 ಹಾಗೂ 7.5 ಮೀಟರ್ ಗಾತ್ರದ್ದಾಗಿರಲಿದೆ ಎಂದು ಹೇಳಿದರು.

ಇದೇ ಮಾರ್ಗದಲ್ಲಿ ಗೀತಾಂಜಲಿ ಟಾಕೀಸ್ ಬಳಿ ಇನ್ನೊಂದು ಕೆಳ ಸೇತುವೆಯನ್ನು ಬೃಹತ್ ವಾಹನಗಳಿಗೆ ನಿರ್ಮಾಣ ಮಾಡಲಾಗುತ್ತಿದೆ. ಇದು 4.5 ಮೀಟರ್ ಹಾಗೂ 7.5 ಮೀಟರ್ ಗಾತ್ರದ್ದಾಗಿರಲಿದೆ. ಈ ಕೆಳ ಸೇತುವೆಗೆ ಜಾಗ ಪಡೆದ ನಂತರ ಟೆಂಡರ್ ಕರೆಯಲಾಗುವುದು ಎಂದು (4ನೇ ಪುಟಕ್ಕೆ)

## ಕಾಂಗ್ರೆಸ್ ಅವಧಿಯಲ್ಲಿ ಸರ್ಕಾರಿ ಜಾಗ ಒತ್ತುವರಿ



**ಕೆರೆ, ಪಾರ್ಕ್, ರಸ್ತೆ ಒತ್ತುವರಿ ಮುಲಾಜಿಲ್ಲದೆ ತೆರವು**

**- ರಾಜನಹಳ್ಳಿ ಶಿವಕುಮಾರ್ ದೂಡಾ ಅಧ್ಯಕ್ಷ**

ದಾವಣಗೆರೆ, ನ. 20- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಾಂಗ್ರೆಸ್ ಆಡಳಿತಾವಧಿಯಲ್ಲಿ ಸರ್ಕಾರಿ ಭೂಮಿ ಒತ್ತುವರಿಯಾಗಿದ್ದು, ಖಾಸಗಿ ವ್ಯಕ್ತಿಗಳು ಸರ್ಕಾರಿ ಜಾಗವನ್ನು ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ. ಸರ್ವೇ ನಡೆಸಿ ತಪ್ಪಿತಸ್ಥರ ಮೇಲೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು ಎಂದು ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಹೇಳಿದ್ದಾರೆ.

ತಮ್ಮ ಕಚೇರಿಯಲ್ಲಿಂದು ಪತ್ರಿಕಾಗೋಷ್ಠಿ ನಡೆಸಿ ದಾಖಲೆ ಸಹಿತ ಮಾಹಿತಿ ನೀಡಿದ ಅವರು, ಬಾತಿ ಕೆರೆ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಸರ್ವೇ ಮಾಡಿಸಿದಾಗ ದೊಡ್ಡಬಾತಿ ಗ್ರಾಮದ ಸರ್ವೇ ನಂ.148 ಹಾಗೂ 149ರಲ್ಲಿನ ಸುಮಾರು 4 ಎಕರೆ 2 ಗುಂಟೆ ಭೂಮಿಯನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿ ಬಡಾವಣೆ ನಿರ್ಮಿಸಿರುವುದು ಗಮನಕ್ಕೆ ಬಂತು ಎಂದರು.

ಕೆರೆ ನೀರು ನಿಲ್ಲುವ ಸ್ಥಳ ರಿಸನಂ.150ರ ಪ್ರದೇಶದಲ್ಲಿ 73.11 ಎಕರೆ ಪ್ರದೇಶವಿದೆ. ಕೆರೆಯ ಪಕ್ಕದಲ್ಲಿ ಹೆಚ್ಚುವರಿಯಾಗಿ 44.4 ಎಕರೆ ಪ್ರದೇಶವನ್ನು 1972ರಲ್ಲಿ ಸರ್ಕಾರ ವಶಪಡಿಸಿಕೊಂಡಿತ್ತು. ಈ ಜಮೀನು ಇಲ್ಲಿಯವರೆಗೆ ಪಹಣಿಯಲ್ಲಿ ಇಂಡೀಕರಣಗೊಂಡಿರಲಿಲ್ಲ. ತಾವು ತಹಶೀಲ್ದಾರ್ ಅವರಿಗೆ ಪತ್ರ ಬರೆದು ಇಂಡೀಕರಣ ಮಾಡಿಸಿದ್ದಾಗಿ ಹೇಳಿದರು.

ಸರ್ವೇ ನಂ.148 ಹಾಗೂ 149ರಲ್ಲಿ ಹಿಂದೆ ಭೂ (2ನೇ ಪುಟಕ್ಕೆ)






## ಆನ್‌ಲೈನ್ ಗೇಮ್ ನಿಷೇಧಕ್ಕೆ ಕಾನೂನು

**ಗೃಹ ಸಚಿವ ಬಸವರಾಜ್ ಬೊಮ್ಮಾಯಿ**

ಬೆಂಗಳೂರು, ನ. 20 - ಆನ್‌ಲೈನ್ ಗೇಮ್‌ನಂತಹ ದುಶ್ಚಟಗಳಿಗೆ ಯುವಕರು ಬಲಿಯಾಗುತ್ತಿದ್ದು ಇದಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ರಾಜ್ಯದಲ್ಲಿ ಆನ್‌ಲೈನ್ ಗೇಮ್‌ಗಳನ್ನು ನಿಷೇಧಿಸಲು ಶೀಘ್ರದಲ್ಲೇ ಹೊಸ ಕಾನೂನು ಜಾರಿಗೆ ತರಲಾಗುವುದು ಎಂದು ಗೃಹ ಸಚಿವ ಬಸವರಾಜ್ ಬೊಮ್ಮಾಯಿ ತಿಳಿಸಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪೊಲೀಸ್ ಪದಕ ಪ್ರಶಸ್ತಿ ಪ್ರದಾನ ಸಮಾರಂಭದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೇರೆ ಬೇರೆ ರಾಜ್ಯಗಳಲ್ಲಿ ಆನ್‌ಲೈನ್ ಗೇಮ್‌ಗಳನ್ನು ನಿಷೇಧಿಸಲಾಗಿದೆ. ಅಲ್ಲಿನ ಸರ್ಕಾರಗಳು ಯಾವ ಯಾವ ನಿಯಮ ಮತ್ತು ಕಾನೂನುಗಳನ್ನು ಜಾರಿಗೊಳಿಸಿದ್ದಾರೆ ಎಂಬ ಬಗ್ಗೆ ಅಧ್ಯಯನ ಮಾಡುತ್ತಿದ್ದೇವೆ. ಶೀಘ್ರದಲ್ಲೇ ರಾಜ್ಯದಲ್ಲೂ ನಿಷೇಧ ಹೇರುವುದು ಖಚಿತ ಎಂದು ಹೇಳಿದರು.

ಅನೇಕ ಕಡೆ ಆನ್‌ಲೈನ್ ಗೇಮ್‌ಗಳಿಗೆ ಯುವಕರು ಮನೆ, ಮಠ, ಆಸ್ತಿ-ಪಾಸ್ತಿ ಎಲ್ಲವನ್ನೂ ಕಳೆದುಕೊಂಡು ಬೀದಿಗೆ ಬಂದಿದ್ದಾರೆ. ಕೆಲವು ಪೋಷಕರು ಹಾಗೂ ಸಾರ್ವಜನಿಕರು ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಲಿಖಿತ ದೂರನ್ನು ನೀಡಿದ್ದಾರೆ ಎಂದು ಮಾಹಿತಿ ನೀಡಿದರು.

ಯುವಕರು ಆನ್‌ಲೈನ್ (3ನೇ ಪುಟಕ್ಕೆ)


**ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಡೆಟ್**

ನಂ. 403/4-ಎ, ಡಾ|| ಮೋದಿ ಕಣ್ಣಿನ ಆಸ್ಪತ್ರೆ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577 002. ಫೋ. : 255974

**ಆಹ್ವಾನ ಪತ್ರಿಕೆ**

ಮೇಲ್ಕಂಡ ಬ್ಯಾಂಕಿನ 2019-20ನೇ ಸಾಲಿನ 28ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ : 21.11.2020ನೇ ಶನಿವಾರ ಬೆಳಗ್ಗೆ 11.00 ಗಂಟೆಗೆ ಷ||ಬ್ರ||ಡಾ|| ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳು, ಎಂ.ಸಿ.ಸಿ. "ಬಿ" ಬ್ಲಾಕ್, ಶಿವಾಚಾರ್ಯ ನಿಕೇತನ ಹಿರೇಮಠ, ದಾವಣಗೆರೆ ಇಲ್ಲಿ ಕರೆಯಲಾಗಿದೆ. ವಾರ್ಷಿಕ ವರದಿಯ ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದೇ ಆಹ್ವಾನ ಪತ್ರಿಕೆ ಎಂದು ತಿಳಿದು ಬ್ಯಾಂಕಿನ ಮಾನ್ಯ ಸದಸ್ಯರು ಸಭೆಗೆ ಸಕಾಲಕ್ಕೆ ಆಗಮಿಸಬೇಕೆಂದು ಕೋರಲಾಗಿದೆ.

**ವಿಶೇಷ ಸೂಚನೆ :**

ಸದಸ್ಯರುಗಳು ಕೋವಿಡ್-19 ಇರುವುದರಿಂದ ಮಾಸ್ಕ್ ಧರಿಸುವುದು ಮತ್ತು ದೈಹಿಕ ಅಂತರವನ್ನು ಕಾಯ್ದುಕೊಳ್ಳುವುದು ಕಡ್ಡಾಯ ಮಾಡಲಾಗಿದೆ. ಭೋಜನದ ವ್ಯವಸ್ಥೆ ಇರುವುದಿಲ್ಲ.

ಕಾರ್ಯನಿರ್ವಾಹಕ ಮಂಡಳಿಯ ಅಪ್ಪಣೆಯ ಮೇರೆಗೆ
ಅಧ್ಯಕ್ಷರು





# ಕಾಂಗ್ರೆಸ್‌ನಿಂದ ಪ್ರತಿ ತಾಲ್ಲೂಕಿಗೆ 2 ಲಕ್ಷ ರೂ. ವೆಚ್ಚದಲ್ಲಿ ವಾರಿಯರ್ಸ್‌ಗಳಿಗೆ ಆರೋಗ್ಯ ಕಿಟ್



ಹೊನ್ನಾಳಿ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಡಿ.ಜಿ.ಶಾಂತನಗೌಡ

ಹೊನ್ನಾಳಿ, ನ.20- ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಪ್ರತಿ ತಾಲ್ಲೂಕಿಗೆ 2 ಲಕ್ಷ ರೂ.ಗಳ ವೆಚ್ಚದಲ್ಲಿ ಆರೋಗ್ಯ ಕಿಟ್ ವಿತರಿಸುತ್ತಿದ್ದರೆ, ಬಿಜೆಪಿ ಕೊರೊನಾ ಹೆಸರಿನ ಮೂಲಕ ವಿವಿಧ ಹಂತಗಳಲ್ಲಿ ಭ್ರಷ್ಟಾಚಾರ ನಡೆಸುತ್ತಿದೆ ಎಂದು ಮಾಜಿ ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು.

ಇಲ್ಲಿನ ಸರ್ಕಾರಿ ನೌಕರರ ಭವನದಲ್ಲಿ ತಾಲ್ಲೂಕಿಗೆ ರಾಜ್ಯ ಕಾಂಗ್ರೆಸ್ ಪಕ್ಷದ ವತಿಯಿಂದ ಆರೋಗ್ಯ ಹಸ್ತ ಕಿಟ್ ವಿತರಿಸಿ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ಇತರೆ ರಾಜ್ಯಗಳಿಗೆ ಈ ಕಾರ್ಯ ಮಾದರಿಯಾಗಿದೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷವು ಬಲಗೊಂಡಿದೆ ಹಾಗೂ ಪಕ್ಷ ಸದೃಢವಾಗಿಯು ಇದೆ ಕಾರ್ಯಕರ್ತರಲ್ಲಿ ಯಾವುದೇ ಆತಂಕ ಬೇಡ. ಬಿಜೆಪಿ ಹಾವಳಿಯಿಂದಾಗಿ ಕಾರ್ಯಕರ್ತರಲ್ಲಿನ ಅನೇಕ ಗೊಂದಲಗಳಿಗೆ ತಿಳಿ ಹೇಳಿದರು. ಸರ್ಕಾರದಿಂದ ತಾಲ್ಲೂಕಿಗೆ ಹಂಚಲು ಬಂದಿದ್ದ ಮಾಸ್ಕಗಳಲ್ಲಿನ ದುರುಪಯೋಗ ಹಾಗೂ ತಾಲ್ಲೂಕಿನಲ್ಲಿ ವಸತಿ ಹಂಚಿಕೆಯಲ್ಲಿನ ಲೋಪದೋಷಗಳ ಬಗ್ಗೆ ದಾಖಲೆ ಸಮೇತ ಮುಂದೆ ನಡೆಸುವ ಕಾರ್ಯಕರ್ತರ ಸಭೆಯಲ್ಲಿ ಬಹಿರಂಗಪಡಿಸುವುದಾಗಿ ಹೇಳಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಮಾತನಾಡಿ, ತಾಲ್ಲೂಕಿನ ಪ್ರತಿ ಗ್ರಾಮ ಪಂಚಾಯಿತಿಯಲ್ಲಿನ ಪಕ್ಷದ ಕೊರೊನ ವಾರಿಯರ್ಸ್‌ಗೆ ಈ ಆರೋಗ್ಯ ಕಿಟ್ ವಿತರಿಸುತ್ತಿದ್ದು, ಅವರೊಂದಿಗೆ ಪಕ್ಷದ ಮುಖಂಡರು ಸಹಕರಿಸುವುದಾಗಿ ಹೇಳಿ, ಕಿಟ್‌ನಲ್ಲಿರುವ ವಸ್ತುಗಳ ಪರಿಚಯಿಸಿ ಅದರ ಬಳಕೆಯ ಕಾರ್ಯವನ್ನು ವಿವರಿಸಿದರು.

ಕಾಂಗ್ರೆಸ್ ಪಕ್ಷದ ತಾಲ್ಲೂಕು ಅಧ್ಯಕ್ಷ ಸಣ್ಣಕ್ಕಿ ಬಸವನಗೌಡ ಮಾತನಾಡಿ, ಇಂದು ಸಾಂಕೇತಿಕವಾಗಿ ಹೊನ್ನಾಳಿ ಹಾಗೂ ಸಾಸ್ವೆಹಳ್ಳಿ ಬ್ಲಾಕ್ ಕಾಂಗ್ರೆಸ್ ವ್ಯಾಪ್ತಿಗೆ ಎರಡು ಕಿಟ್‌ಗಳ ವಿತರಿಸುತ್ತಿದ್ದು. ನಾಳೆಯಿಂದಲೆ ಕ್ರಮವಾಗಿ ಇತರೆ ಪಂಚಾಯತಿಗಳಿಗೆ ಹೋಗಿ ನೇರವಾಗಿ ತಲುಪಿಸಿವ ಮೂಲಕ ಎಲ್ಲ ಹಳ್ಳಿಗಳಲ್ಲಿ ಈ ಕಾರ್ಯ ಯಶಸ್ವಿಗೊಳಿಸೋಣ ಎಂದರು.

ಸಮಾರಂಭದಲ್ಲಿ ಕಾಂಗ್ರೆಸ್ ಮುಖಂಡರಾದ ಹುಣುಸಘಟ್ಟ ಗದ್ದುಗೇಶ್, ವಿಶ್ವನಾಥ, ಹೆಚ್.ಎ. ಉಮಾಪತಿ ಮತ್ತಿತರರು ಮಾತನಾಡಿದರು. ಅರಕೆರೆ ಮಧುಗೌಡ, ಜಿ.ಹೆಚ್. ತಮ್ಮಣ್ಣ, ಮೈಲಪ್ಪ, ಮರಳುಸಿದ್ದಪ್ಪ, ಶೇಖರಪ್ಪ, ಕುಶಲ್, ತರಗನಹಳ್ಳಿ ರಮೇಶ್, ಅಮಿತ್ ಮತ್ತಿತರರಿದ್ದರು.

# ಬರದ ನಾಡಿನ ರೈತರ ಅಭಿವೃದ್ಧಿಗೆ ಸಹಕಾರಿ ಸಂಘಗಳ ಸಹಕಾರ ಅತಿಮುಖ್ಯ



ಜಗಳೂರಿನ ಸಹಕಾರ ಸಪ್ತಾಹದಲ್ಲಿ ಶಾಸಕ ಎಸ್.ವಿ. ರಾಮಚಂದ್ರ

ಜಗಳೂರು, ನ.20- ಬರದ ನಾಡಿನ ರೈತರ ಅಭಿವೃದ್ಧಿಗೆ ಸಹಕಾರ ಸಂಘಗಳ ಸಹಕಾರ ಅತಿಮುಖ್ಯವಾಗಿದೆ ಎಂದು ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ಎಸ್.ವಿ. ರಾಮಚಂದ್ರ ತಿಳಿಸಿದರು.

ತಾಲ್ಲೂಕಿನ ಸಿದ್ಧಿಹಳ್ಳಿ ಗ್ರಾಮದ ಆಂಜನೇಯ ದೇವಸ್ಥಾನದ ಆವರಣದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ, ಜಿಲ್ಲಾ ಸಹಕಾರ ಯೂನಿಯನ್, ಶಿವಮೊಗ್ಗ - ದಾವಣಗೆರೆ - ಚಿತ್ರದುರ್ಗ ಸಹಕಾರ ಹಾಲು ಉತ್ಪಾದಕರ ಸಂಘ, ಪಿಕಾರ್ಡ್ ಬ್ಯಾಂಕ್, ಸಿದ್ದಿಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ವಿವಿಧ ರೀತಿಯ ಸಹಕಾರ ಸಂಘಗಳ ಸಂಯುಕ್ತಾಶ್ರಯದಲ್ಲಿ ಇಂದು ಹಮ್ಮಿಕೊಂಡಿದ್ದ 67ನೇ ಸಹಕಾರ ಸಪ್ತಾಹ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಾಲ್ಲೂಕಿಗೆ ಸಹಕಾರ ಸಂಘಗಳ ಮೂಲಕ 22 ಕೋಟಿ ರೂ. ಅನುದಾನ ಬಿಡುಗಡೆ ಮಾಡಿ ಸಾಲ ಸೌಲಭ್ಯ ನೀಡಲಾಗಿದೆ. ರೈತರು ಸದುಪಯೋಗ ಪಡೆದುಕೊಳ್ಳಬೇಕು. ಆರ್ಥಿಕವಾಗಿ ಅಭಿವೃದ್ಧಿಯಾಗಬೇಕು ಎಂದು ಸಲಹೆ ನೀಡಿದರು.

**ಆರ್ಥಿಕ ಬಿಕ್ಕಟ್ಟು ಭದ್ರಾ ಮೇಲ್ದಂಡೆ ಯೋಜನೆ ಪ್ರಗತಿ ವಿಳಂಬ;** ಕೊರೊನಾದಿಂದ ಸರ್ಕಾರ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಹಿನ್ನೆಲೆ ಭದ್ರಾ ಮೇಲ್ದಂಡೆ ಯೋಜನೆ ಪ್ರಗತಿ ವಿಳಂಬವಾಗಿದ್ದು ರೈತರು ಸಹಕರಿಸಬೇಕು. ಮುಂದಿನ ವರ್ಷದ ಆರಂಭದಲ್ಲಿ ಸರ್ಕಾರಕ್ಕೆ ಒತ್ತಡ ತರುವ ಮೂಲಕ ಕಾಮಗಾರಿಯನ್ನು ಪ್ರಥಮ ಆದ್ಯತೆ ನೀಡಿ ಕೈಗೆತ್ತಿಕೊಳ್ಳಲಾಗುವುದು ಎಂದು ಶಾಸಕರು ತಿಳಿಸಿದರು.

ಜಿಲ್ಲಾ ನಿರ್ದೇಶಕರ ಸಂಘದ ಅಧ್ಯಕ್ಷ ಷಣ್ಮುಖಪ್ಪ ಮತ್ತು ಲೀಡ್ ಬ್ಯಾಂಕ್‌ನ ನಿವೃತ್ತ ಮ್ಯಾನೇಜರ್ ಎನ್.ಟಿ. ಯರ್‍ರಿಸ್ವಾಮಿ ಮಾತನಾಡಿದರು.

ಜಿಲ್ಲಾ ನಿರ್ದೇಶಕ ಮುರುಗೇಶ್ ಮಾತನಾಡಿ, ಸಾಲದ ಸುಳಿಯಲ್ಲಿ ಸಿಲುಕಿ ನಲುಗಿ ಹೋಗಿರುವ ರೈತರ ಬದುಕು ಹಸನಾಗಿಸುವ ದೃಷ್ಠಿಕೋನದಿಂದ ಸಹಕಾರ ಸಂಘಗಳು ಸ್ಥಾಪನೆಯಾಗಿದ್ದು, ಇದೀಗ 6 ಲಕ್ಷ 44 ಸಾವಿರ ಹಳ್ಳಿಗಳು ಸಹಕಾರ ಸಂಘಗಳ ಬ್ಯಾಂಕ್‌ಗಳನ್ನು ಅವಲಂಬಿಸಿವೆ ಎಂದರು.

ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ವೇಣುಗೋಪಾಲ್ ರೆಡ್ಡಿ, ಸಿಇಓ ತಾವರ್ಯಾನಾಯ್ಕ ಸಹಕಾರ ಸಂಘಗಳ ನಿರ್ದೇಶಕರುಗಳಾದ ಧನಂಜಯ್ ರೆಡ್ಡಿ, ಚೌಡಮ್ಮ, ಹನುಮಂತರೆಡ್ಡಿ ತಾಪಂ ಸದಸ್ಯ ತಿಮ್ಮಾಭೋವಿ, ಮಾಜಿ ಜಿಪಂ ಸದಸ್ಯ ಎಸ್.ಕೆ. ರಾಮರೆಡ್ಡಿ, ಪ್ರಕಾಶ್ ರೆಡ್ಡಿ, ಬಿಸ್ತುವಳ್ಳಿ ಬಾಬು, ಡಿಸಿಸಿ ಬ್ಯಾಂಕ್ ಕ್ಷೇತ್ರಿಯ ಅಧಿಕಾರಿ ಹಾಲಸ್ವಾಮಿ, ಕಾರ್ಯದರ್ಶಿ ರಾಮ್ ಡಿ.ಪಿ. ಸೇರಿದಂತೆ ಇತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಕರ್ನಾಟಕ ರಾಜ್ಯೋತ್ಸವ ಹಾಗೂ ಹಾಸ್ಯ ಸಂಜೆ

ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್‌ಶೆಟ್ಟಿ ಬಣ) ಯುವ ಘಟಕದ ವತಿಯಿಂದ ಇಂದು ಶನಿವಾರ ಸಂಜೆ 6 ಗಂಟೆಗೆ ಶ್ರೀ ಶಿವಯೋಗ ಮಂದಿರದಲ್ಲಿ 65ನೇ ಕರ್ನಾಟಕ ರಾಜ್ಯೋತ್ಸವ ಆಚರಣೆ ಕನ್ನಡ ಹಬ್ಬ ಹಾಗೂ ಹಾಸ್ಯ ಸಂಜೆ ಕಾರ್ಯಕ್ರಮ ನಡೆಯಲಿದೆ.

ಸಾನ್ನಿಧ್ಯ : ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ. ಮುಖ್ಯ ಅತಿಥಿಗಳು : ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್, ಪಾಲಿಕೆ ಮಹಾಪೌರ ಬಿ.ಜಿ. ಅಜಯ್‌ಕುಮಾರ್.

ಕು॥ ನಮನ ಅವರಿಂದ ದಾವಣಗೆರೆ ಮತ್ತು ಕರುನಾಡಿನ ಕುರಿತು ನುಡಿಗಳು ಹಾಗೂ ಹಾಸ್ಯ ಪ್ರಸ್ತುತಿಗಾರರಾದ ಮಿಮಿಕ್ರಿ ಗೋಪಿ ಅವರಿಂದ ಹಾಸ್ಯ ಸಂಜೆ ಕಾರ್ಯಕ್ರಮ ನಡೆಯುವುದು. ಕ.ರ.ವೇ ರಾಜ್ಯಾಧ್ಯಕ್ಷ ಪ್ರವೀಣಕುಮಾರ್ ಶೆಟ್ಟಿ ಅಧ್ಯಕ್ಷತೆ ವಹಿಸುವರು ಎಂದು ಕ.ರ.ವೇ. ಯುವ ಘಟಕದ ಜಿಲ್ಲಾಧ್ಯಕ್ಷ ಎಸ್. ಶ್ರೇಯಸ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ರಾಜ್ಯೋತ್ಸವ

ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಆಶ್ರಯದಲ್ಲಿ ಇಂದು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವು ರೆಡ್‌ಕ್ರಾಸ್ ಭವನದಲ್ಲಿ ಇಂದು ಸಂಜೆ 4.30 ಕ್ಕೆ ನಡೆಯಲಿದೆ. ರೆಡ್‌ಕ್ರಾಸ್ ಸಂಸ್ಥೆಯ ಅಧ್ಯಕ್ಷ ಡಾ. ಎ.ಎಂ. ಶಿವಕುಮಾರ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಯಾಗಿ ಸಾಹಿತಿ ಬಾ.ಮ. ಬಸವರಾಜಯ್ಯ ಭಾಗವಹಿಸುವರು ಎಂದು ರೆಡ್‌ಕ್ರಾಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸಿ.ಎ. ಉಮೇಶ್ ಶೆಟ್ಟಿ ತಿಳಿಸಿದ್ದಾರೆ.

## ನಗರದ ಸಾಕ್ಷಿ ವರಸಿದ್ದಿ ವಿನಾಯಕ ದೇವಸ್ಥಾನದಲ್ಲಿ ಇಂದು ಕಾರ್ತಿಕೋತ್ಸವ



ಕೆ.ಆರ್. ಮಾರ್ಕೆಟ್‌ನಲ್ಲಿರುವ ಶ್ರೀ ಸಾಕ್ಷಿ ವರಸಿದ್ದಿ ವಿನಾಯಕ ಸ್ವಾಮಿಯ 30ನೇ ವಾರ್ಷಿಕೋತ್ಸವ ಮತ್ತು ಕಾರ್ತಿಕ ಮಹೋತ್ಸವ ನಡೆಯಲಿದೆ. ಇಂದು ಬೆಳಿಗ್ಗೆ 6.30 ಕ್ಕೆ ಶ್ರೀ ವಿನಾಯಕ ಸ್ವಾಮಿಗೆ ಅಭಿಷೇಕ ಮತ್ತು ಅಲಂಕಾರ ಪೂಜೆ, ರಾತ್ರಿ 8 ಗಂಟೆಗೆ ಕಾರ್ತಿಕ ಮಹೋತ್ಸವ, ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗವಿದೆ.

## ವಾಲ್ಮೀಕಿ ಜಾತ್ರೆ : ಹರಪನಹಳ್ಳಿಯಲ್ಲಿ ಸಭೆ

ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ಇಂದು ಮಧ್ಯಾಹ್ನ 1 ಗಂಟೆಗೆ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಪುರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಪೂರ್ವಭಾವಿ ಸಭೆ ನಡೆಯಲಿದೆ ಎಂದು ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚಂಗೆಪ್ಪ ತಿಳಿಸಿದ್ದಾರೆ.

## ನಗರದಲ್ಲಿಂದು ವಿದ್ಯುತ್ ವ್ಯತ್ಯಯ

ದಾವಣಗೆರೆ ಸ್ಮಾರ್ಟ್ ಸಿಟಿ ವತಿಯಿಂದ ವಿದ್ಯುತ್ ಭೂಗತ ಮಾರ್ಗವನ್ನು ನಿರ್ಮಿಸಿ ಚಾಲನೆಗೊಳಿಸಲಾಗಿದೆ. ಈ ರಸ್ತೆಗಳಲ್ಲಿ ಗೃಹ / ವಾಣಿಜ್ಯ ಬಳಕೆಯ ಅಂಗಡಿಗಳಿಗೆ ಎಲ್.ಟಿ ಓವರ್ ಹೆಡ್ ಮಾರ್ಗದಿಂದ ಎಲ್.ಟಿ. ಭೂಗತ ಮಾರ್ಗಕ್ಕೆ ವಿದ್ಯುತ್ ಸಂಪರ್ಕವನ್ನು ಬದಲಾಯಿಸಬೇಕಾಗಿ ರುವುದರಿಂದ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರದಲ್ಲಿ ಇಂದು ಚಿಗುರು-ಬಾಲ ಪ್ರತಿಭೆಗಳ ಸಾಂಸ್ಕೃತಿಕ ಕಾರ್ಯಕ್ರಮ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಇಂದು ಬೆಳಿಗ್ಗೆ 11.30 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ಬಾಲ ಪ್ರತಿಭೆಗಳ ಸಾಂಸ್ಕೃತಿಕ ಕಾರ್ಯಕ್ರಮ 'ಚಿಗುರು' ನಡೆಯಲಿದೆ.

ಉದ್ಘಾಟನೆ : ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ. ಅಧ್ಯಕ್ಷತೆ : ಶಾಸಕ ಎಸ್.ಎ ರವೀಂದ್ರನಾಥ್. ಮುಖ್ಯ ಅತಿಥಿಗಳು : ದೀಪಾ ಜಗದೀಶ್, ಸಾಕಮ್ಮ ಗಂಗಾಧರಯ್ಯ, ಪದ್ಮಾ ಬಸವಂತಪ್ಪ, ಡಾ.ಹೆಚ್.ಎಸ್. ಮಂಜುನಾಥ್ ಕುರ್ಕಿ, ಡಾ.ಎಂ.ಜಿ.ಈಶ್ವರಪ್ಪ, ರವೀಂದ್ರ ಅರಳಗುಪ್ಪ.

ಇಂಚರ ಮತ್ತು ದರ್ಶನ್ ವಾದ್ಯಸಂಗೀತವನ್ನು ನುಡಿಸುವರು. ಜೀವಿತ ಸಂಗಡಿಗರು ಜಾನಪದ ಗೀತೆಗಳನ್ನು ಹಾಡುವರು. ಸಾನ್ನಿಧ್ಯ ಮತ್ತು ಸಂಗಡಿರು ಸುಗಮ ಸಂಗೀತ, ದೀಪ್ತಿ ಪ್ರಸಾದ್ ಶಾಸ್ತ್ರೀಯ ಸಂಗೀತ, ರಜನಿ ಮತ್ತು ಸಂಗಡಿಗರು ಸಮೂಹ ನೃತ್ಯ, ಆರ್.ಹೇಮಾವತಿ ಮತ್ತು ಸಂಗಡಿಗರು ಯಕ್ಷಗಾನ ಮೂಡಲಪಾಯ, ಕವನ ಏಕಪಾತ್ರಾಭಿನಯ ಕಾರ್ಯಕ್ರಮವನ್ನು ನಡೆಸುವರು.

## ಕಸಾಪದಿಂದ ಇಂದು ನುಡಿ ಹಬ್ಬ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿ ಯಿಂದ ಅಂತರ್ಜಾಲದ ಮೂಲಕ ನಡೆಯುತ್ತಿರುವ ಕನ್ನಡ ನುಡಿ ಹಬ್ಬದಲ್ಲಿ ಇಂದು ಸಂಜೆ 6 ರಿಂದ 7ರವರೆಗೆ 'ಕನ್ನಡ ಕಾವ್ಯದಲ್ಲಿ ಹೊಸ ಸಂವೇದನಗಳು' ವಿಷಯ ಕುರಿತು ನ್ಯಾಮತಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕಿ ಶ್ರೀಮತಿ ಡಾ. ನಾದ ಅವರು ಉಪನ್ಯಾಸ ನೀಡುವರು.

ಆಸಕ್ತರು youtube channel links : Davanagere Taluk ka.sa.pa kannada Nudi_habba2020, web site : http://www.youtube.com/channel/ucjWzFm4YFnhAx-ce4UwjPsYg ಮುಖಾಂತರ ಕಾರ್ಯಕ್ರಮ ವೀಕ್ಷಿಸಬಹುದು.

## ನಗರದಲ್ಲಿ ಇಂದು ಕಿತ್ತೂರು ರಾಣಿ ಚನ್ನಮ್ಮ ಜಯಂತ್ಯೋತ್ಸವ

ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಜಿಲ್ಲಾ ಘಟಕ, ಹರ ಸೇವಾ ಸಂಸ್ಥೆ, ನಗರ ಘಟಕ ಹಾಗೂ ಮಹಿಳಾ ಘಟಕಗಳ ಆಶ್ರಯದಲ್ಲಿ ಇಂದು ಸಂಜೆ 5.30ಕ್ಕೆ ಸಮಾಜದ ಜಿಲ್ಲಾ ಘಟಕದ ಕಛೇರಿಯಲ್ಲಿ ಕಿತ್ತೂರು ರಾಣಿ ಚನ್ನಮ್ಮನವರ ಜಯಂತ್ಯೋತ್ಸವ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಧ್ಯಕ್ಷತೆಯನ್ನು ಬಿ.ಸಿ. ಉಮಾಪತಿ ವಹಿಸಲಿದ್ದಾರೆ. ಮುಖ್ಯ ಅತಿಥಿಗಳು : ಕನ್ನಡ ಪರ ಹಿರಿಯ ಹೋರಾಟಗಾರ ಬಸವರಾಜ ಐರಣಿ, ಸಾಹಿತಿ ಶ್ರೀಮತಿ ನೀಲಗುಂದ ಜಯಮ್ಮ.

## ಯೂಟ್ಯೂಬರ್‌ಗೆ 500 ಕೋಟಿ ರೂ. ನಿಂದನಾ ನೋಟಿಸ್ ಕಳಿಸಿದ ಅಕ್ಷಯ್

ನವದೆಹಲಿ, ನ. 20 – ಸುಶಾಂತ್ ಸಿಂಗ್ ರಜಪೂತ್ ಸಾವಿನ ಪ್ರಕರಣದಲ್ಲಿ ತಮ್ಮ ವಿರುದ್ಧ ಸುಳ್ಳಿನ ಹಾಗೂ ಆಧಾರ ರಹಿತ ಆರೋಪ ಮಾಡಿದ ಬಿಹಾರದ ಯೂಟ್ಯೂಬರ್ ವಿರುದ್ಧ ಬಾಲಿವುಡ್ ನಟ ಅಕ್ಷಯ್ ಕುಮಾರ್ 500 ಕೋಟಿ ರೂ.ಗಳ ಮಾನನಷ್ಟ ಪ್ರಕರಣ ದಾಖಲಿಸಿದ್ದಾರೆ.

ಕಾನೂನು ಉದ್ಯಮವಾದ ಐ.ಸಿ. ಲೀಗಲ್ ಮೂಲಕ ಅಕ್ಷಯ್ ಕುಮಾರ್ ನವೆಂಬರ್ 17ರಂದು ರಶೀದ್ ಸಿದ್ದಿಕಿ ಎಂಬುವವರಿಗೆ ನೋಟಿಸ್ ಕಳಿಸಿದ್ದಾರೆ.

ಸಿದ್ದಿಕಿ ತಮ್ಮ ಯೂಟ್ಯೂಬ್ ಚಾನಲ್ ಆದ ಎಫ್.ಎಫ್. ನ್ಯೂಸ್ ಮೂಲಕ ಅವಹೇಳನಕಾರಿ ವಿಡಿಯೋಗಳನ್ನು ತಮ್ಮ ವಿರುದ್ಧ ಪ್ರಸಾರ ಮಾಡಿದ್ದಾರೆ. ಈ ಬಗ್ಗೆ ಅವರು ತಮ್ಮ ಬಳಿ ಬೇಷರತ್ತಾಗಿ ಕ್ಷಮೆ ಯಾಚಿಸಬೇಕು ಎಂದು ಅಕ್ಷಯ್ ಕೇಳಿದ್ದಾರೆ. ಇದೇ ಯೂಟ್ಯೂಬರ್ ವಿರುದ್ಧ ಮುಂಬೈ ಪೊಲೀಸರು ಪ್ರತ್ಯೇಕ ಪ್ರಕರಣ ದಾಖಲಿಸಿದ್ದಾರಲ್ಲದೇ, ಆಕ್ಷೇಪಾರ್ಹ ವಿಡಿಯೋ ಅನ್ನು ಚಾನಲ್‌ನಿಂದ ಕಿತ್ತು ಹಾಕಿದ್ದಾರೆ.

## ನಿಷೇಧಕ್ಕೆ ಕಾನೂನು

(1ನೇ ಪುಟದಿಂದ) ಗೇಮ್‌ಗಳಿಂ ದಾಗಿ ಕಾನೂನು ಬಾಹಿರ ಚಟುವ ಟಿಕೆಗಳಲ್ಲೂ ತೊಡಗಿದ್ದಾರೆ. ಇದಕ್ಕೆ ಕಡಿವಾಣ ಹಾಕದಿದ್ದರೆ ಯುವಜನ ತೆಯನ್ನು ಕಳೆದುಕೊಳ್ಳಬೇಕಾ ಗುತ್ತದೆ ಹಾಗಾಗಿ ನಿಷೇಧ ಹೇರಲು ಮುಂದಾಗಿದ್ದೇವೆ ಎಂದರು.


**ಸಾರ್ವಜನಿಕ ಪ್ರಕಟಣೆ**

**ವೆಂಕಟೇಶ್ ಬಿನ್ ಚಂದ್ರಹಾಸ,** ಬಸವೇಶ್ವರನಗರ ಕುಂದವಾಡ ರಸ್ತೆ, ದಾವಣಗೆರೆ ಸಿಟಿ ವಾಸಿಯಾದ ನನ್ನ ಬಾಬ್ತು ದಾವಣಗೆರೆ ಸಿಟಿ, ನಿಟುವಳ್ಳಿಯಲ್ಲಿರುವ ವಾಸದ ಮನೆಯ ಮೂಲ ಕ್ರಯಪತ್ರವು **ದಿ: 22.09.1989 ರಂದು ನನ್ನ ಹೆಸರಿನಲ್ಲಿ ನೋಂದಣಿಯಾಗಿರುತ್ತದೆ.** ಈ ಮೂಲ ಕ್ರಯ ಪತ್ರವು ದಿ: 16.11.2020 ರಂದು ದಾವಣಗೆರೆ ಸಿಟಿ, ನಿಟುವಳ್ಳಿ ಮುಖ್ಯರಸ್ತೆಯಲ್ಲಿ ಕಳೆದು ಹೋಗಿರುತ್ತದೆ. ಈ ಮೂಲ ಕ್ರಯಪತ್ರ ಸಿಕ್ಕವರು ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:

**ಸುನೀಲ್ ಕಟಗಿ**
**ಮನೆ ನಂ 1675/76, ರಂಗನಾಥ ಬಡಾವಣೆ,**
**ವಿದ್ಯಾನಗರ, ದಾವಣಗೆರೆ. ಮೊ: 97402 72122**


## ಪೊಲೀಸ್ ಪೇದೆ ಹುದ್ದೆಗಳಿಗೆ ನಾಳೆ ಪರೀಕ್ಷೆ

ದಾವಣಗೆರೆ ನ.20 - ವಿಶೇಷ ಮೀಸಲು ಪೊಲೀಸ್ ಕಾನ್ಸ್‌ಟೇಬಲ್(ಕೆಎಸ್‌ಆರ್‌ಪಿ/ಐಆರ್ ಬಿ) (ಪುರುಷ) ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ 7680 ಅಭ್ಯರ್ಥಿಗಳಿಗೆ ನಾಡಿದ್ದು ದಿನಾಂಕ 22 ರ ಭಾನುವಾರ ಬೆಳಿಗ್ಗೆ 11 ರಿಂದ 12.30 ರವರೆಗೆ ಲಿಖಿತ ಪರೀಕ್ಷೆಯನ್ನು ನಗರದ ಈ ಕೆಳಗಿನ ಪರೀಕ್ಷಾ ಕೇಂದ್ರಗಳಲ್ಲಿ ನಡಸಲಾಗುತ್ತದೆ.

ಅಭ್ಯರ್ಥಿಗಳ ರೋಲ್ ಸಂಖ್ಯೆ 3201481 ರಿಂದ 3201880 ರವರೆಗೆ ಎಸ್‌ಬಿಸಿ ಪ್ರಥಮ ದರ್ಜೆ ಕಾಲೇಜು, 3201901 ರಿಂದ 3202240 ರವರೆಗೆ ಬಾಪೂಜಿ ಪಾಲಿಟೆಕ್ನಿಕ್, 3202261 ರಿಂದ 3202760 ರವರೆಗೆ ಜಿ.ಎಂ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ, 320 2781 ರಿಂದ 3203260 ರವರೆಗೆ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ, 3203281 ರಿಂದ 3203560 ರವರೆಗೆ ಬಿಎಸ್ ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜು, 3203581 ರಿಂದ 3204080 ರವರೆಗೆ ಸೇಂಟ್ ಜಾನ್ಸ್ ಆಂಗ್ಲ ಮಾಧ್ಯಮ ಶಾಲೆ, 3204101 ರಿಂದ 3204240 ರವರೆಗೆ ಸಿದ್ದಗಂಗಾ ಪಿಯು ಕಾಲೇಜು, 3204561 ರಿಂದ 3205020 ರವರೆಗೆ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು, 3205041 ರಿಂದ 3205360 ರವರೆಗೆ ಎಸ್‌ಜಿಬಿ ಪ್ರಥಮ ದರ್ಜೆ ಕಾಲೇಜು, 3205381 ರಿಂದ 3205880 ರವರೆಗೆ ಎವಿ ಕಮಲಮ್ಮ ಮಹಿಳಾ ಕಾಲೇಜು, 3205901 ರಿಂದ 3206400 ರವರೆಗೆ ಎಆರ್‌ಜಿ ಕಲಾ ಮತ್ತು ವಾಣಿಜ್ಯ ಕಾಲೇಜು, 3206421 ರಿಂದ 3207320 ರವರೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, 3207341 ರಿಂದ 3207840 ರವರೆಗೆ ಶ್ರೀ ತರಳಬಾಳು ಜಗದ್ಗುರು ಸಂಯುಕ್ತ ಪದವಿಪೂರ್ವ ಕಾಲೇಜು, 3207861 ರಿಂದ 3208220 ರವರೆಗೆ ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜು, 3208241 ರಿಂದ 3208540 ರವರೆಗೆ ಡಿಆರ್‌ಆರ್ ಹೈಸ್ಕೂಲ್, 3208561 ರಿಂದ 3208960 ರವರೆಗೆ ಜಿ.ಎಂ.ಹಾಲಮ್ಮ ಪಿಯು ಕಾಲೇಜು, 3208981 ರಿಂದ 3209480 ರವರೆಗೆ ಜೈನ್ ಪಾಲಿಟೆಕ್ನಿಕ್ ನಲ್ಲಿ ಪರೀಕ್ಷೆ ನಡೆಯಲಿದೆ.

ಅರ್ಹ ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳ ಬಹುದಾಗಿದ್ದು, ಅಭ್ಯರ್ಥಿಗಳು ಲಿಖಿತ ಪರೀಕ್ಷಾ ಕೇಂದ್ರಕ್ಕೆ ನಿಗದಿತ ಸಮಯಕ್ಕಿಂತ 60 ನಿಮಿಷ ಮುಂಚಿತವಾಗಿ ಹಾಜರಾಗುವಂತೆ ಎಸ್ಪಿ ಹನುಮಂತರಾಯ ಅವರು ತಿಳಿಸಿದ್ದಾರೆ.


ಕರ್ನಾಟಕ ಸರ್ಕಾರ/ ಕೃಷಿ ಇಲಾಖೆ

**ಸಹಾಯಕ ಕೃಷಿ ನಿರ್ದೇಶಕರ ಕಛೇರಿ**

ಬೀಜ ಪರೀಕ್ಷಾ ಪ್ರಯೋಗಾಲಯ, ಆರ್‌ಎಂಸಿ ಯಾರ್ಡ್, ದಾವಣಗೆರೆ.

**ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆ**

ಸಹಾಯಕ ಕೃಷಿ ನಿರ್ದೇಶಕರು, ಬೀಜ ಪರೀಕ್ಷಾ ಪ್ರಯೋಗಾಲಯ, ದಾವಣಗೆರೆ ಕಛೇರಿಯ ರೂ. 55,563–00 (ತೆರಿಗೆ ಹೊರತುಪಡಿಸಿ)ಗಳ ಅನುಪಯುಕ್ತ ಜಡವಸ್ತುಗಳನ್ನು (ಪ್ರಯೋಗಾಲಯದ ಅನುಪಯುಕ್ತ ಉಪಕರಣಗಳನ್ನು) ನಿಯಮಾನುಸಾರ ದರಪಟ್ಟಿ/ಸಾರ್ವಜನಿಕ ಬಹಿರಂಗ ಹರಾಜಿನ ಮೂಲಕ ದಿನಾಂಕ: 27.11.2020ರಂದು ಬೆಳಿಗ್ಗೆ 10 ಗಂಟೆಗೆ ಈ ಕಛೇರಿಯ ಆವರಣದಲ್ಲಿ ವಿಲೇವಾರಿ ಮಾಡಲು ಬಹಿರಂಗ ಹರಾಜು ಪ್ರಕಟಣೆ ಹೊರಡಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು/ಬಿಡ್ಡುದಾರರು ಹರಾಜಿನಲ್ಲಿ ಭಾಗವಹಿಸಲು ಕೋರಿದೆ.

ನಿಬಂಧನೆಗಳು: 1) ಬಹಿರಂಗ ಹರಾಜಿನಲ್ಲಿ ಬಂದ ದರಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಕಛೇರಿಯ ಮುಖ್ಯಸ್ಥರಿಗೆ ಇರುತ್ತದೆ. 2) ಹೆಚ್ಚಿನ ಬಿಡ್ಡುದಾರರು ಹರಾಜಿನ ಮೊತ್ತವನ್ನು ಕಛೇರಿ ಮುಖ್ಯಸ್ಥರಿಂದ ಅನುಮೋದನೆ ಪಡೆದ ನಂತರ ಹಣವನ್ನು ಪಾವತಿಸಬೇಕು. 3) ಪಡೆದ ಸಾಮಗ್ರಿಗಳನ್ನು ಸ್ವಂತ ಖರ್ಚಿನಲ್ಲಿ ತಕ್ಷಣವೇ ಸಾಗಾಣಿಕೆ ಮಾಡಬೇಕು. 4) ಮಾಸ್ಕ್ ಧರಿಸುವುದು ಕಡ್ಡಾಯವಾಗಿರುತ್ತದೆ.

ಸಹಿ/- **ಸಹಾಯಕ ಕೃಷಿ ನಿರ್ದೇಶಕರು**
ಬೀಜ ಪರೀಕ್ಷಾ ಪ್ರಯೋಗಾಲಯ, ದಾವಣಗೆರೆ

ದಿನಾಂಕ: 19.11.2020


# ಹರಿಹರ ನಗರಸಭೆಗೆ ಗುತ್ತೂರು ಸೇರ್ಪಡೆ ಮಾಡದಿರಲು ಒತ್ತಾಯ




ಹರಿಹರ, ನ.20- ರಾಜ್ಯ ಸರ್ಕಾರವು ಮೊನ್ನೆ ನಡೆದ ಸಂಪುಟ ಸಭೆಯಲ್ಲಿ ನಗರದ ಹೊರವಲಯದ ಗುತ್ತೂರು ಗ್ರಾಮವನ್ನು ಯಾವುದೇ ಪೂರ್ವ ಸಿದ್ದತೆ ಮಾಡದೇ ಹರಿಹರ ನಗರಸಭೆಗೆ ಸೇರ್ಪಡೆ ಮಾಡಿ ಆದೇಶ ನೀಡಿದ್ದು, ಗ್ರಾಮಕ್ಕೆ ಮಾರಕವಾಗಿದೆ. ಅದನ್ನು ಈ ಕೂಡಲೇ ಹಿಂಪಡೆಯಬೇಕು ಎಂದು ಗ್ರಾಮದ ಸಮಾಜ ಸೇವಕ ಕರಿಬಸಪ್ಪ ಗುತ್ತೂರು ಒತ್ತಾಯಿಸಿದ್ದಾರೆ.

ನಗರದ ರಚನಾ ಕ್ರೀಡಾ ಟ್ರಸ್ಟ್‌ನಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮದಲ್ಲಿ ಒಂದು ಬಾರಿ ಸರ್ವೇ ಮಾಡದೇ, ಡೋರ್ ನಂ. ದಾಖಲೆಗಳನ್ನು ಪರಿಶೀಲನೆ ನಡೆಸದೆ ದಿಢೀರ್ ನಿರ್ಣಯ ತೆಗೆದುಕೊಳ್ಳಲಾಗಿದೆ. ಈಗಾಗಲೇ ಗ್ರಾಮ ಪಂಚಾಯಿತಿ ಚುನಾವಣೆಗೆ ಎಲ್ಲಾ ರೀತಿಯ ಸಿದ್ಧತೆ ಸಹ ಮಾಡಲಾಗಿ ಅದಕ್ಕೆ ಪೂರಕವಾದ ಮೀಸಲಾತಿ ಸಹ ಘೋಷಣೆ ಮಾಡಲಾಗಿದೆ. ಆದ್ದರಿಂದ ನಮ್ಮ ಗ್ರಾಮದಲ್ಲಿ ಈ ಬಾರಿ ಗ್ರಾಮ ಪಂಚಾಯಿತಿ ಚುನಾವಣೆಗೆ ಅವಕಾಶ ನೀಡಿ, ಮುಂದೆ ಐದು ವರ್ಷದ ನಂತರದಲ್ಲಿ ಗುತ್ತೂರು ಗ್ರಾಮವನ್ನು ಹರಿಹರ ನಗರಸಭೆಗೆ ಸೇರ್ಪಡೆ ಮಾಡಬಹುದು ಎಂದು ಅವರು ತಿಳಿಸಿದರು.


ಈಗಾಗಲೇ ಹಲವು ಗ್ರಾಮಗಳು ನಗರ ಸಭೆ ಸೇರ್ಪಡೆ ಆವಾಗಿನಿಂದ ಇಲ್ಲಿಯವರೆಗೆ ಆ ಗ್ರಾಮಗಳಿಗೆ ನಗರಸಭೆ ವತಿಯಿಂದ ಯಾವುದೇ ಅಭಿವೃದ್ಧಿ ಕೆಲಸವನ್ನು ಮಾಡಿರುವುದಿಲ್ಲ. ಆ ಗ್ರಾಮಗಳಲ್ಲಿ ಅಭಿವೃದ್ಧಿ ಕುಂಠಿತವಾಗಿ ಅಲ್ಲಿನ ಜನರು ನಗರಸಭೆಗೆ ಅಲೆದಾಡುತ್ತಿದ್ದಾರೆ ಎಂದು ಕಿಡಿ ಕಾರಿದರು.

ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಚಂದ್ರಪ್ಪ ಮಾತನಾಡಿ, ಗ್ರಾಮದಲ್ಲಿ ಶೇ 70 ರಷ್ಟು ಕೂಲಿ ಕಾರ್ಮಿಕರು ಇರುವುದರಿಂದ ಹರಿಹರ ನಗರಕ್ಕೆ ಹೋಗಿ ಬಂದು ಮಾಡಲು ಆಗುವುದಿಲ್ಲ. ಇದರಿಂದಾಗಿ ಇಲ್ಲಿನ ಬಡವರಿಗೆ ಅನುಕೂಲಕ್ಕಿಂತ ಅನಾನುಕೂಲ ಹೆಚ್ಚಾಗುತ್ತದೆ. ಆದ್ದರಿಂದ ನಾವು ಯಾವುದೇ ಕಾರಣಕ್ಕೂ ನಗರಸಭೆ ಸೇರ್ಪಡೆ ಮಾಡಲು ಬಿಡುವುದಿಲ್ಲ ಎಂದು ಹೇಳಿದರು.

ಜೆಡಿಎಸ್ ಮುಖಂಡ ಬಸವಲಿಂಗಪ್ಪ ಗೌಡ್ರು ಮಾತನಾಡಿ, ನಮ್ಮ ಗ್ರಾಮದ ಗ್ರಾಮ ಪಂಚಾಯಿತಿಯಲ್ಲಿ 15 ಸದಸ್ಯರು ಇದ್ದು, ಓರ್ವ ತಾ.ಪಂ. ಸದಸ್ಯರು ಇದ್ದರೂ ಸಹ ಗ್ರಾಮವನ್ನು ಇದುವರೆಗೂ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇನ್ನು ನಗರಸಭೆ ಓರ್ವ ಸದಸ್ಯರು ಹೇಗೆ ಗ್ರಾಮವನ್ನು ಅಭಿವೃದ್ಧಿ ಪಡಿಸುತ್ತಾರೆ? ಮತ್ತು ಹರಿಹರ ನಗರಸಭೆ ನೂತನ ಸದಸ್ಯರು 18 ತಿಂಗಳ ಆಯ್ಕೆಯಾಗಿ ಅವರ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನದ ಆಯ್ಕೆ ಅಂತಿಮ ಘಟ್ಟವನ್ನು ತಲುಪಿಲ್ಲ ಇನ್ನೂ ನಮ್ಮ ಗ್ರಾಮವನ್ನು ಹೇಗೆ ಅಭಿವೃದ್ಧಿಪಡಿಸಲು ಸಾಧ್ಯ ಎಂದು ಪ್ರಶ್ನಿಸಿದರು.

ಹನುಮಂತಪ್ಪ ಮಾತನಾಡಿದರು. ಈ ಸಂದರ್ಭದಲ್ಲಿ ವೆಂಕಟೇಶ್, ವಿನಾಯಕ, ಕೊಟ್ರಪ್ಪ ಇತರರು ಹಾಜರಿದ್ದರು.

# ಕೂಡ್ಲಿಗಿ ತಾಲ್ಲೂಕನ್ನು ವಿಜಯನಗರ ಜಿಲ್ಲೆಗೆ ಸೇರಿಸಲು ಶ್ರಮಿಸುವೆ



ಕೂಡ್ಲಿಗಿ ಶಾಸಕ ಎನ್.ವೈ. ಗೋಪಾಲಕೃಷ್ಣ ಭರವಸೆ

ಕೂಡ್ಲಿಗಿ, ನ. 20- ಕೂಡ್ಲಿಗಿ ತಾಲ್ಲೂಕನ್ನು ಶತಾಯ-ಗತಾಯ ಪ್ರಯತ್ನ ಮಾಡಿ ತಾಲ್ಲೂಕಿನ ಜನತೆಯ ಅಭಿಪ್ರಾಯದಂತೆ ವಿಜಯನಗರ ಜಿಲ್ಲೆಗೆ ಸೇರಿಸಲು ಶ್ರಮಿಸುವೆ ಎಂದು ಕೂಡ್ಲಿಗಿ ಶಾಸಕ ಎನ್.ವೈ. ಗೋಪಾಲಕೃಷ್ಣ ತಾಲ್ಲೂಕಿನ ಜನತೆಗೆ ಭರವಸೆ ನೀಡಿದರು.

ತಾಲ್ಲೂಕಿನ ಕಾನಾಮಡಗು ದಾಸೋಹ ಮಠದಲ್ಲಿ ನಿನ್ನೆ ಆಯೋಜಿಸಿದ್ದ ವಿಜಯನಗರ ಜಿಲ್ಲೆಗೆ ಕೂಡ್ಲಿಗಿ ತಾಲ್ಲೂಕನ್ನು ಸೇರಿಸುವ ಕುರಿತ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಈ ಹಿಂದೆ ಸಿಎಂ ಯಡಿಯೂರಪ್ಪ ಅವರನ್ನು ಕಂಡು ಕೂಡ್ಲಿಗಿಯನ್ನು ವಿಜಯನಗರ ಜಿಲ್ಲೆಗೆ ಸೇರ್ಪಡೆ ಮಾಡುವಂತೆ ಒತ್ತಾಯ ಮಾಡಿದ್ದೆ. ಭಾನುವಾರ ಹೊಸಪೇಟೆಗೆ ಸಮೀಪದ ವೈಕುಂಠ ಅತಿಥಿ ಗೃಹಕ್ಕೆ ಕಾನೂನು ಸಚಿವ ಮಾಧುಸ್ವಾಮಿ ಬರಲಿದ್ದಾರೆ. ಅಲ್ಲಿಗೆ ಸಂಸದ ದೇವೇಂದ್ರಪ್ಪ, ಜಿಲ್ಲಾ ಬಿಜೆಪಿ ಅಧ್ಯಕ್ಷ ಪಿ. ಚನ್ನಬಸವನಗೌಡ್ರು, ಕೂಡ್ಲಿಗಿ ತಾಲ್ಲೂಕಿನ ಮುಖಂಡರ ಜೊತೆ ಮಾಧುಸ್ವಾಮಿ ಹಾಗೂ ಸಚಿವ ಆನಂದ್ ಸಿಂಗ್ ಅವರನ್ನು ಭೇಟಿ ಮಾಡಿ ವಿಜಯನಗರ ಜಿಲ್ಲೆಗೆ ಕೂಡ್ಲಿಗಿಯನ್ನು ಉಳಿಸುವಂತೆ ಮನವಿ ಮಾಡಲಾಗುವುದು ಎಂದು ಹೇಳಿದರು.

ಬಳ್ಳಾರಿ ಜಿಲ್ಲಾ ಬಿಜೆಪಿ ಎಸ್ಟಿ ಮೋರ್ಚಾ ಅಧ್ಯಕ್ಷ ಬಂಗಾರು ಹನುಮಂತು ಮಾತನಾಡಿ, ಕೂಡ್ಲಿಗಿ ತಾಲ್ಲೂಕನ್ನು ಘೋಷಿತ ವಿಜಯನಗರ ಜಿಲ್ಲೆಗೆ ಸೇರಿಸುವುದು ವೈಜ್ಞಾನಿಕವಾಗಿಯೂ, ಭೌಗೋಳಿಕವಾಗಿಯೂ ಸೂಕ್ತವಾಗಿದೆ ಎಂದರು.

ಈ ಸಂದರ್ಭದಲ್ಲಿ ಕಾನಾಮಡಗು ದಾಸೋಹ ಮಠದ ಶ್ರೀ ಐಮಡಿ ಶರಣಾರ್ಯರು, ಬಳ್ಳಾರಿ ಸಂಸದ ವೈ. ದೇವೇಂದ್ರಪ್ಪ, ಬಿಜೆಪಿ ಜಿಲ್ಲಾ ಅಧ್ಯಕ್ಷ ಪಿ. ಚನ್ನಬಸವನಗೌಡ್ರು, ಬಿಜೆಪಿ ಯುವ ಮುಖಂಡರಾದ ಭೀಮೇಶ್, ಕೆ.ಬಿ. ಮಂಜುನಾಥ, ಬಿಜೆಪಿ ಜಿಲ್ಲಾ ಹಿರಿಯ ಮುಖಂಡ ಕೆ.ಎಂ. ತಿಪ್ಪೇಸ್ವಾಮಿ, ತಾ.ಪಂ. ಸದಸ್ಯ ಹುಂಡೇ ಪಾಪಾನಾಯಕ, ತಾಲ್ಲೂಕು ಬಿಜೆಪಿ ಅಧ್ಯಕ್ಷ ಚನ್ನಪ್ಪ ಮತ್ತಿತರರು ಹಾಜರಿದ್ದರು.


Repco Home Finance We Value Your Dream

**ರೆಪ್ಕೋ ಹೋಮ್ ಫೈನಾನ್ಸ್ ಲಿಮಿಟೆಡ್**

CIN No. L65922TN2000TLC044655

ಫೋ : 08192-232836, ಮೊ : 9342440967, 9008090228, 7676823234, 9986297913

**ಗೃಹ ಸಾಲ ಮೇಳ**

ಸರಳ ವಿಧಾನದಲ್ಲಿ ಸಾಲ ಮಂಜೂರಾತಿ

ದಿ : 21-11-2020 ಶನಿವಾರ ಬೆಳಿಗ್ಗೆ 10 ರಿಂದ ಸಂಜೆ 5 ರ ವರೆಗೆ

ಸ್ಥಳ : ನಂ. 78-7ಎ, ಮೊದಲನೇ ಮಹಡಿ, ನೀಲ್‌ಕಮಲ್ ಫರ್ನಿಚರ್ ಶೋ ರೂಂ ಪಕ್ಕ ರೈತರಬೀದಿ, ಪಿ.ಜೆ. ಬಡಾವಣೆ, ಎ.ವಿ.ಕೆ. ಕಾಲೇಜ್ ರಸ್ತೆ, ದಾವಣಗೆರೆ - 577 002.

ಈ ಕೆಳಕಂಡ ಸಾಲಗಳಿಗೆ ಮಂಜೂರಾತಿ ನೀಡಲಾಗುವುದು :

- ಖಾಲಿ ನಿವೇಶನ /ಮನೆ/ಫ್ಲಾಟ್ ಖರೀದಿಸಲು
- ಮನೆ / ವಾಣಿಜ್ಯ ಕಟ್ಟಡ ಕಟ್ಟಲು
- ಮನೆ ನವೀಕರಣಕ್ಕೆ
- ಹೆಚ್ಚಿನ ಬಡ್ಡಿದರದ ಅಸ್ತಿತ್ವದಲ್ಲಿರುವ ಸಾಲವನ್ನು ಕಡಿಮೆ ಬಡ್ಡಿಗೆ ವರ್ಗಾಯಿಸಲು ಹಾಗೂ ಹೆಚ್ಚುವರಿ ಸಾಲ ಪಡೆಯಲು
- ಅಡಮಾನ ಸಾಲ

ಹಬ್ಬದ ಪ್ರಯುಕ್ತ ವಿಶೇಷ ರಿಯಾಯಿತಿ

ಗೃಹ ಸಾಲ 7.75%* ರಿಂದ ಪ್ರಾರಂಭ

ಆಡಳಿತಾತ್ಮಕ ಶುಲ್ಕದಲ್ಲಿ ಸಂಪೂರ್ಣ ಮನ್ನಾ ಸಂಸ್ಕರಣ ಶುಲ್ಕದಲ್ಲಿ ಶೇ. 0.25 % ವಿಶೇಷ ರಿಯಾಯಿತಿ

ಆದಾಯ ಪತ್ರ ಹಾಗೂ ಆಸ್ತಿಯ ವಿವರಗಳೊಂದಿಗೆ ಭೇಟಿ ನೀಡಿ.*

## ಸ್ಮಾರ್ಟ್ ಕಾಮಗಾರಿ ವಿಳಂಬಕ್ಕೆ ಕ್ರಿಮಿನಲ್ ಮೊಕದ್ದಮೆ : ಸಚಿವ

ಬೆಂಗಳೂರು, ನ.20 - ಸ್ಮಾರ್ಟ್ ಯೋಜನೆಯಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸದಿದ್ದರೆ ಅಂತಹ ಗುತ್ತಿಗೆದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದಾಗಿ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ಎಚ್ಚರಿಕೆ ನೀಡಿದ್ದಾರೆ.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಹಲವು ಬಾರಿ ಎಚ್ಚರಿಕೆ ನೀಡಲಾಗಿತ್ತು. ಆದರೆ ಅವರು ಈವರೆಗೂ ಕಾಮಗಾರಿಯನ್ನು ಪೂರ್ಣಗೊಳಿಸಿಲ್ಲ. ಹೀಗಾಗಿ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು. ಒಂದು ವೇಳೆ ಕಳಪೆಯಿಂದ ಕೂಡಿದ್ದರೆ ಅಂತಹ ಗುತ್ತಿಗೆದಾರರ ವಿರುದ್ಧವೂ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಹಿಂದೆಮುಂದೆ ನೋಡುವುದಿಲ್ಲ ಎಂದು ಎಚ್ಚರಿಕೆ ಕೊಟ್ಟರು.

ಯಾವುದೇ ಕಾರಣಕ್ಕೂ ನಾವು ಕಳಪೆ ಗುಣಮಟ್ಟಕ್ಕೆ ರಾಜಿಯಾಗುವುದಿಲ್ಲ. ಅಂತಹ ಪ್ರಕರಣಗಳು ಕಂಡುಬಂದರೆ ಅಂತವರನ್ನು ಕಪ್ಪುಪಟ್ಟಿಗೆ ಸೇರಿಸಲು ಹಿಂದೆಮುಂದೆ ನೋಡುವುದಿಲ್ಲ ಎಂದು ಗುಡುಗಿದರು.

ಸ್ಮಾರ್ಟ್ ಯೋಜನೆಯಡಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಮೊದಲ ಹಂತದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದರು.

# ಮುಖ್ಯಮಂತ್ರಿ ಬಿಎಸ್‌ವೈ ಪರ್ಯಾಯ ನಾಯಕತ್ವಕ್ಕೆ ಶೋಧ

ಬೆಂಗಳೂರು, ನ.20 - ಕರ್ನಾಟಕದಲ್ಲಿ ಪಕ್ಷವನ್ನು 2023 ರಲ್ಲಿ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರಕ್ಕೆ ತರಬೇಕೆನ್ನುವ ಉದ್ದೇಶದಿಂದ ಹೊಸ ನಾಯಕತ್ವಕ್ಕೆ ವರಿಷ್ಠರು ಹುಡುಕಾಟ ಆರಂಭಿಸಿದ್ದಾರೆ ಎನ್ನಲಾಗುತ್ತಿದೆ.

ಹಾಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಡಿಸೆಂಬರ್ ತಿಂಗಳೇ ಅಧಿಕಾರದ ಕೊನೆಯಾಗಬಹುದು. ಅವರನ್ನು ಗೌರವಯುತ ವಾಗಿ ಕೆಳಗಿಳಿಸಿ, ಲಿಂಗಾಯತ ಸಮು ದಾಯಕ್ಕೆ ಸೇರಿದ ಮತ್ತೊಬ್ಬರಿಗೆ ಪಟ್ಟ ಕಟ್ಟಲು ದೆಹಲಿ ನಾಯಕರು ಮುಂದಾಗಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ಕರ್ನಾಟಕದಲ್ಲಿ ಲಿಂಗಾಯತ ಮತಗಳನ್ನು ಪಕ್ಷದಲ್ಲೇ ಉಳಿಸಿಕೊ ಳ್ಳುವ ಉದ್ದೇಶದಿಂದ ಆ ಸಮುದಾ ಯದ ನಾಯಕರಿಗೆ ನಾಯಕತ್ವ ನೀಡಿ, ಮುಂಬರುವ ಚುನಾವಣೆಯನ್ನು ಅವರ ನೇತೃತ್ವದಲ್ಲೇ ಹೋಗಲು ಪಕ್ಷ ಮುಂದಾಗಿದೆ.

2023 ರ ಚುನಾವಣೆ ವೇಳೆಗೆ ಯಡಿಯೂರಪ್ಪನವರಿಗೆ ಬರೋಬ್ಬರಿ 80 ವರ್ಷಗಳಾಗಿರುತ್ತವೆ. ಇಂತಹ ಸಂದರ್ಭದಲ್ಲಿ ಅವರ ನಾಯಕತ್ವದಲ್ಲಿ ಚುನಾವಣೆ ಎದುರಿಸಲು ಸಾಧ್ಯವಿಲ್ಲ. ಕೊನೇ ಗಳಿಗೆಯಲ್ಲಿ ಹೊಸ ನಾಯಕನ ಆಯ್ಕೆಯೂ ಸರಿಯಲ್ಲ.

ಈಗಿನಿಂದಲೇ ನಾಯಕತ್ವಕ್ಕೆ ಒತ್ತು ನೀಡಿ, ಮುಂದಿನ ಚುನಾವಣೆ ಎದುರಿಸಲು ವರಿಷ್ಠರು ದೂರದ ಲೆಕ್ಕಚಾರ ಹಾಕಿದ್ದಾರೆ. ಆದರೆ, ಯಡಿಯೂರಪ್ಪನವರಿಗೆ ಪರ್ಯಾಯವಾಗಿ ಸಮಬಲದ ನಾಯಕರು ರಾಜ್ಯದಲ್ಲಿ ದೊರೆಯು ತ್ತಿಲ್ಲ. ಹಾಗೆಂದು 80 ವರ್ಷದ ವಯಸ್ಸಿನವರನ್ನು ಮುಂದಿಟ್ಟು ಕೊಂಡು ಚುನಾವಣೆಗೆ ಹೋಗಲು ಆಗುವುದಿಲ್ಲ. ಇದಕ್ಕಾಗಿ ಪರ್ಯಾಯ ನಾಯಕನ ಶೋಧ ನಡೆಯುತ್ತಿದೆ.

ಡಿಸೆಂಬರ್ ಅಂತ್ಯದ ವೇಳೆಗೆ ಬಿಜೆಪಿ ವರಿಷ್ಠರು ಹೊಸ ನಾಯಕನಿಗೆ ಪಟ್ಟ ಕಟ್ಟುವ ಆಲೋಚನೆಯಲ್ಲಿ ದ್ದಾರೆ. ಹೊಸ ನಾಯಕರಿಗೆ ಪಟ್ಟ ಕಟ್ಟುವ ಮುನ್ನ ಯಡಿಯೂರಪ್ಪ ನವರನ್ನು ಗೌರವಯುತ ವಾಗಿ ಅಧಿಕಾರದಿಂದ ಕೆಳಗಿಳಿಸಬೇಕು. ಅವರು ಪಕ್ಷಕ್ಕಾಗಿ ದುಡಿದಿದ್ದಾರೆ. ಅಷ್ಟೇ ಅಲ್ಲ ವರ್ಚಸ್ವಿ ನಾಯಕರೂ ಆಗಿದ್ದಾರೆ.



**ಲಿಂಗಾಯತ ಸಮುದಾಯದಲ್ಲೇ ಪಂಚಮಶಾಲಿ ಇಲ್ಲವೆ ಗಾಣಿಗ ಉಪಪಂಗಡಕ್ಕೆ ಸೇರಿದ ಒಬ್ಬರನ್ನು ಮುಖ್ಯಮಂತ್ರಿ ಯನ್ನಾಗಿ ಮಾಡುವ ಉದ್ದೇಶ ದೆಹಲಿ ನಾಯಕರದ್ದಾಗಿದೆ.**

ಹಾಗೆಂದು ಪಕ್ಷದ ಸಂವಿಧಾನ ವನ್ನು ಧಿಕ್ಕರಿಸಿ, ಅಧಿಕಾರ ನೀಡಲು ಸಾಧ್ಯವಿಲ್ಲ. ಯಡಿಯೂರಪ್ಪ ಅವರಿಗೆ ಪರ್ಯಾಯ ಅಧಿಕಾರವನ್ನು ನೀಡಿ, ಪಕ್ಷದಲ್ಲೇ ಉಳಿಸಿಕೊಂಡು, ಮುಂದಿನ ಚುನಾವಣೆ ಎದುರಿಸಲು ಕಸರತ್ತು ನಡೆಸಿದೆ. ಹೊಸ ನಾಯಕನ ಅನ್ವೇಷಣೆ ಮತ್ತು ರಾಜ್ಯ ರಾಜಕೀಯದಲ್ಲಿ ಮುಂದಾಗಬಹು ದಾದ ಬಿರುಗಾಳಿ ಯನ್ನು ಎದುರಿಸಲು ಸಿದ್ಧತೆ ಮಾಡಿಕೊಳ್ಳುವ ಉದ್ದೇಶದಿಂದಲೇ ದೆಹಲಿ ವರಿಷ್ಠರು ಅರುಣ್‌ಸಿಂಗ್ ಅವರನ್ನು ರಾಜ್ಯಕ್ಕೆ ಕಳುಹಿಸಿದ್ದಾರೆ.

ಇವರಿಗೆ ರಾಜ್ಯದ ಉಸ್ತುವಾರಿ ವಹಿಸಿರುವ ವರಿಷ್ಠರು ಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಾರೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಡಿಸೆಂಬರ್‌ನ ಮೊದಲ ಭಾಗದಲ್ಲಿ ರಾಜ್ಯದಲ್ಲಿ ಮೂರು ದಿನ ಪ್ರವಾಸ ಕೈಗೊಳ್ಳುತ್ತಿದ್ದು, ಅದಕ್ಕೂ ಮುನ್ನವೇ ಅರುಣ್‌ಸಿಂಗ್ ಇಲ್ಲಿ ವೇದಿಕೆ ಸಿದ್ದಪಡಿಸಲಿದ್ದಾರೆ.

ನಾಯಕತ್ವದ ಬದಲಾವಣೆಯತ್ತ ಗಮನಹರಿಸಿರುವ ವರಿಷ್ಠರು ಇದೇ ಕಾರಣಕ್ಕಾಗಿ ಸಂಪುಟ ವಿಸ್ತರಣೆ ಇಲ್ಲವೆ ಪುನಾರಚನೆಗೆ ಅನುಮತಿ ನೀಡಿಲ್ಲ ಎನ್ನಲಾಗಿದೆ. ಆದರೆ ಮುಖ್ಯಮಂತ್ರಿಯವರು ಮಾತ್ರ ಎರಡು ಮೂರು ದಿನಗಳಲ್ಲಿ ಮಂತ್ರಿಮಂಡಲ ವಿಸ್ತರಣೆಗೆ ಅನುಮತಿ ದೊರೆಯಲಿದೆ ಎಂಬ ವಿಶ್ವಾಸವನ್ನು ಇಂದೂ ಕೂಡಾ ವ್ಯಕ್ತಪಡಿಸಿದ್ದಾರೆ.

ಈ ಮಧ್ಯೆ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಕಾರಣರಾದ ಜಲಸಂಪ ನ್ಮೂಲ ಸಚಿವ ರಮೇಶ್ ಜಾರಕಿಹೊಳಿಯವರನ್ನು ದೆಹಲಿ ವರಿಷ್ಠರು ಕರೆಸಿಕೊಂಡು ಇಂದು ಚರ್ಚೆ ಮಾಡಿದ್ದಾರೆ. ಡಿಸೆಂಬರ್ ತಿಂಗಳಲ್ಲೇ ನಾಯಕತ್ವ ಬದಲಾವಣೆಯನ್ನು ಪಕ್ಷದ ಸದಸ್ಯರಿಂದಲೇ ಕೇಳಿ ಬರುತ್ತದೆ ಎಂದು ಹೇಳಲಾಗಿದೆ.

## ವೀರಶೈವ-ಲಿಂಗಾಯತ ಅಭಿವೃದ್ಧಿ ನಿಗಮ ವೀರಶೈವ ಮಹಾಸಭಾದಿಂದ ಸಿಎಂಗೆ ಸನ್ಮಾನ



**ಉದ್ದೇಶಿತ ಕರ್ನಾಟಕ ವೀರಶೈವ - ಲಿಂಗಾಯತ ಅಭಿವೃದ್ಧಿ ನಿಗಮಕ್ಕೆ 500 ಕೋಟಿ ರೂ. ಗಳ ಅನುದಾನ ಒದಗಿಸಲು ಮತ್ತು ವೀರಶೈವ - ಲಿಂಗಾಯತ ಸಮಾಜವನ್ನು 2ಎ ವರ್ಗಕ್ಕೆ ಸೇರ್ಪಡೆ ಮಾಡುವ ಬೇಡಿಕೆಗೆ ಮುಖ್ಯಮಂತ್ರಿಗಳ ಸಕಾರಾತ್ಮಕ ಸ್ಪಂದನೆ.**
**- ಡಾ. ಶಾಮನೂರು ಶಿವಶಂಕರಪ್ಪ**
ಅಧ್ಯಕ್ಷರು, ಅಖಿಲ ಭಾರತ ವೀರಶೈವ ಮಹಾಸಭಾ

ಬೆಂಗಳೂರು,ನ.20- ಕರ್ನಾಟಕ ವೀರಶೈವ - ಲಿಂಗಾಯತ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲು ನಿರ್ಧಾರ ಕೈಗೊಂಡಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಅಖಿಲ ಭಾರತ ವೀರಶೈವ ಮಹಾಸಭಾ ಸನ್ಮಾನಿಸಿ, ಗೌರವಿಸುವುದರ ಮೂಲಕ ಕೃತಜ್ಞತೆ ಸಲ್ಲಿಸಿದೆ.

ಇಂದಿಲ್ಲಿ ಮುಖ್ಯಮಂತ್ರಿಗಳ ನಿವಾಸದಲ್ಲಿ ಯಡಿಯೂರಪ್ಪ ಅವರನ್ನು ಭೇಟಿ ಮಾಡಿದ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ ನೇತೃತ್ವದ ಮಹಾಸಭಾದ ಪದಾಧಿಕಾರಿಗಳ ಹಾಗೂ ಸಮಾಜದ ಮುಖಂಡರುಗಳು ಮುಖ್ಯಮಂತ್ರಿಗಳನ್ನು ಗೌರವಿಸಿದರು.

ಯಡಿಯೂರಪ್ಪ ಅವರನ್ನು ಶಾಲು ಹೊದಿಸಿ, ಪೇಟ ತೊಡಿಸಿ ಸನ್ಮಾನಿಸಿದ ಎಸ್ಸೆಸ್, ಉದ್ದೇಶಿತ ಕರ್ನಾಟಕ ವೀರಶೈವ - ಲಿಂಗಾಯತ ಅಭಿವೃದ್ಧಿ ನಿಗಮಕ್ಕೆ 500 ಕೋಟಿ ರೂ. ಗಳ ಅನುದಾನ ಒದಗಿಸುವಂತೆ ಮತ್ತು ವೀರಶೈವ ಲಿಂಗಾಯತ ಸಮಾಜವನ್ನು 2ಎ ವರ್ಗಕ್ಕೆ ಸೇರ್ಪಡೆ ಮಾಡಬೇಕೆಂದು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಂಡರು.

ಕರ್ನಾಟಕದಲ್ಲಿ ವೀರಶೈವ ಲಿಂಗಾಯತ ಸಮಾಜದವರು ಅತೀ ಹೆಚ್ಚಿನ ಸಂಖ್ಯೆಯಲ್ಲಿದ್ದು, ಇದರಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಸಮಾಜವನ್ನು 2ಎ ವರ್ಗಕ್ಕೆ ಸೇರ್ಪಡೆ ಮಾಡಿ ಆದೇಶ ಹೊರಡಿಸುವಂತೆ ಎಸ್ಸೆಸ್ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ವಿನಂತಿಸಿಕೊಂಡರು.

ಸನ್ಮಾನಕ್ಕೆ ಕೃತಜ್ಞತೆ ಸಲ್ಲಿಸಿ, ಸಮಾಜದವರಿಂದ ಮನವಿ ಸ್ವೀಕರಿಸಿ ಮಾತನಾಡಿದ ಯಡಿಯೂರಪ್ಪ, ಉದ್ದೇಶಿತ ನಿಗಮಕ್ಕೆ 500 ಕೋಟಿ ರೂ. ಅನುದಾನ ಒದಗಿಸುವ ಭರವಸೆ ನೀಡಿದರು. ಅಲ್ಲದೇ, ಸಮಾಜವನ್ನು 2ಎ ವರ್ಗಕ್ಕೆ ಸೇರಿಸುವ ಕುರಿತಂತೆ ಅಗತ್ಯ ಕ್ರಮ ಕೈಗೊಳ್ಳುವುದಾಗಿಯೂ ಆಶ್ವಾಸನೆ ನೀಡಿದರು.

ವೀರಶೈವ ಮಹಾಸಭಾದ ರಾಷ್ಟ್ರೀಯ ಮಹಾಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ, ಉಪಾಧ್ಯಕ್ಷರುಗಳೂ ಆಗಿರುವ ದಾವಣಗೆರೆಯ ಕೈಗಾರಿಕೋದ್ಯಮಿಗಳಾದ ಅಥಣಿ ಎಸ್. ವೀರಣ್ಣ, ಎಸ್.ಎಸ್. ಗಣೇಶ್, ಪದಾಧಿಕಾರಿ ಸಚ್ಚಿದಾನಂದ, ಮಹಾಸಭಾದ ರಾಷ್ಟ್ರೀಯ ಮಹಿಳಾ ಘಟಕದ ಅಧ್ಯಕ್ಷರಾದ ಮಧುರಾ ಅಶೋಕ, ಕಾರ್ಯದರ್ಶಿ ರೇಣುಕಾ ಪ್ರಸಾದ್ ಮತ್ತಿತರರು ಈ ಸರಳ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಶ್ರೀ ರೇಣುಕಾಚಾರ್ಯ ವಿದ್ಯಾಸಂಸ್ಥೆಗೆ ಸುರೇಶ್ ಉಪಾಧ್ಯಕ್ಷ



ಬೆಂಗಳೂರು, ನ.20- ಶ್ರೀ ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆಗೆ ಇಂದು ನಡೆದ ಚುನಾವಣೆಯಲ್ಲಿ ದಾವಣಗೆರೆಯ ಶ್ರೀ ಸೋಮೇಶ್ವರ ವಿದ್ಯಾಲಯದ ಕಾರ್ಯದರ್ಶಿ ಕೆ.ಎ. ಸುರೇಶ್ ಅವರು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಎಸ್. ಪವನ್ ಕುಮಾರ್ ಘೋಷಿಸಿದ್ದಾರೆ.

ಸಂಸ್ಥೆಯ ಮುಂದಿನ 3 ವರ್ಷಗಳ ಅವಧಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಡಾ. ಕೆ.ವಿ. ವೇದಮೂರ್ತಿ, ಉಪಾಧ್ಯಕ್ಷರುಗಳಾಗಿ ಕೆ.ಎಂ. ಸುರೇಶ್, ವಿಶ್ವನಾಥ ಹಿರೇಮಠ, ಕಾರ್ಯದರ್ಶಿಯಾಗಿ ಪ್ರಭುದೇವ ಕಲ್ಮಠ, ಖಜಾಂಚಿಯಾಗಿ ಎಸ್.ಆರ್. ವೀರಭದ್ರಯ್ಯ ಅವಿರೋಧವಾಗಿ ಚುನಾಯಿತಗೊಂಡಿದ್ದಾರೆ.

## ಗುರುಲಿಂಗಪ್ಪ, ಆಲೂರು ಸಹಕಾರ ಸಂಘಕ್ಕೆ ಅಧ್ಯಕ್ಷ



ದಾವಣಗೆರೆ, ನ.20- ದಾವಣಗೆರೆ ತಾಲ್ಲೂಕು ಆಲೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಜಿ. ಗುರುಲಿಂಗಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಡಿ.7ರಂದು ವಿಧಾನಸೌಧ ಮುತ್ತಿಗೆ



ದಾವಣಗೆರೆ, ನ.20- ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಗಳ ವಿರುದ್ಧ ಬರುವ ಡಿಸೆಂಬರ್ 7ರಂದು ವಿಧಾನಸೌಧಕ್ಕೆ ಮುತ್ತಿಗೆ ಹಾಕುವ ಬಗ್ಗೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಅಧ್ಯಕ್ಷತೆಯಲ್ಲಿ ನಗರದ ಎಪಿಎಂಸಿ ಸಭಾಂಗಣದಲ್ಲಿ ಇಂದು ನಡೆದ ರಾಜ್ಯ ಸಮಿತಿ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು.

ಸಭೆಯಲ್ಲಿ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿ, ಕೇಂದ್ರ ಸರ್ಕಾರವು ಭೂ ಸುಧಾರಣೆ ಕಾಯ್ದೆ, ಎಪಿಎಂಸಿ ಕಾಯ್ದೆ, ವಿದ್ಯುತ್ ಕಾಯ್ದೆ ಇವುಗಳ ತಿದ್ದುಪಡಿ ಕಾನೂನು ರೂಪಿಸಿದ್ದು, ರಾಷ್ಟ್ರಪತಿ ಅವರ ಸಹಿ ಆಗಿದೆ. ರಾಜ್ಯ ಸರ್ಕಾರ ಕಾನೂನು ಜಾರಿಗೆ ಹೊರಟಿದೆ. ಈ ತಿದ್ದುಪಡಿ ಕಾಯ್ದೆಗಳಿಂದ ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹೇಳುವ ಯಾವ ಗಂಡು ಮಕ್ಕಳೂ ಇಲ್ಲ. ಮುಖ್ಯಮಂತ್ರಿ ಯಡಿಯೂರಪ್ಪ ಅವರ ಕೈಯಲ್ಲಿ ಇದು ಸಾಧ್ಯವಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ತಿದ್ದುಪಡಿ ಕಾಯ್ದೆಗಳ ವಿರೋಧಿಸುವ ಜೊತೆಗೆ ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಸಹ ರೈತ ಉತ್ಪನ್ನಗಳ ಖರೀದಿ ಕೇಂದ್ರ ತೆರೆಯಬೇಕು. ಅದು ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ ವರ್ಷದ ಉಳಿದ ದಿನಗಳಲ್ಲಿ ತೆರೆದಿರಬೇಕು. ಮಳೆಯಿಂದಾದ ಬೆಳೆ ಹಾನಿಗೆ ಸೂಕ್ತ ಪರಿಹಾರ ನೀಡಬೇಕು, ಆವರ್ತ ನಿಧಿ ಸ್ಥಾಪಿಸಿ ರಾಗಿ, ಜೋಳ, ಭತ್ತ ಸೇರಿದಂತೆ ಇನ್ನಿತರೆ ರೈತರ ಉತ್ಪನ್ನಗಳ ಖರೀದಿಸಿ ಅದನ್ನು ಸೂಕ್ತ ಬೆಲೆಗೆ ಮಾರಾಟ ಮಾಡುವ ಪ್ರಯತ್ನಕ್ಕೆ ಸರ್ಕಾರ ಮುಂದಾಗಬೇಕು. ಇದಕ್ಕಾಗಿ 10ರಿಂದ 15 ಸಾವಿರ ಕೋಟಿ ರೂ. ಬೇಕಿದ್ದು, 5 ಸಾವಿರ ಕೋಟಿಯನ್ನಾದರೂ ಸದ್ಯಕ್ಕೆ ಮೀಸಲಿಡಬೇಕಿದೆ. ಆರ್ಥಿಕ ನೀತಿ ರೂಪಿಸದೇ ಗ್ರಾಮೀಣ ಭಾಗದಲ್ಲಿ ವಿದ್ಯುತ್ ಕಾಯ್ದೆ ತಿದ್ದುಪಡಿ ತರುವುದು ಸರಿಯಲ್ಲ. ಈ ಎಲ್ಲಾ ವಿಚಾರವಾಗಿ ಸರ್ಕಾರದ ಕಣ್ಣು ತೆರೆಸಲು ಬಹುಮುಖ್ಯವಾಗಿ ಬೆಂಗಳೂರಿನಲ್ಲಿ ನಡೆಯುವ ವಿಧಾನಸಭೆ ಅಧಿವೇಶನ ಪ್ರಾರಂಭ ದಿನ ಡಿಸೆಂಬರ್ 7ರಂದು ವಿಧಾನಸೌಧಕ್ಕೆ ಮುತ್ತಿಗೆ ಹಾಕಿ ಸರ್ಕಾರಕ್ಕೆ ಚುರುಕು ಮುಟ್ಟಿಸುವುದು ನಮ್ಮ ಪ್ರಮುಖ ಹೋರಾಟವೆಂದರು.

ಚಳಿಗಾಲದ ಅಧಿವೇಶನ ಬೆಳಗಾವಿಯಲ್ಲಿ ನಡೆಸಲಾಗುತ್ತಿತ್ತು. ಆದರೆ, ರೈತರ ಪ್ರತಿಭಟನೆ ಎದುರಿಸಬೇಕಾಗುತ್ತದೆ ಎಂಬ ಭಯದಲ್ಲಿ ಸರ್ಕಾರ ಅಧಿವೇಶನವನ್ನು ಬೆಂಗಳೂರಿನಲ್ಲಿ ನಡೆಸಲು ನಿರ್ಧರಿಸಿದೆ. ಆದರೂ ಸಹ ನಾವುಗಳು ಸರ್ಕಾರದ ಗಮನ ಸೆಳೆಯುವ ನಿಟ್ಟಿನಲ್ಲಿ ಹೋರಾಟಕ್ಕೆ ಸಿದ್ಧರಾಗಬೇಕಿದೆ. ಪ್ರತಿಯೊಬ್ಬರೂ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಇದೇ ದಿನಾಂಕ 27ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ನಡೆಯುವ ಪ್ರತಿಭಟನೆಯಲ್ಲಿ ರಾಜ್ಯ ಸಮಿತಿ ಸದಸ್ಯರು ಭಾಗವಹಿಸೋಣ. ಏಕೆಂದರೆ ದೆಹಲಿಯಲ್ಲಿನ ಪರಿಸ್ಥಿತಿ ಚೆನ್ನಾಗಿಲ್ಲ. ಎಲ್ಲರೂ ಅಲ್ಲಿ ಹೋಗಿ ಪಾಲ್ಗೊಳ್ಳಲು ಸಾಧ್ಯವಾಗದ ಕಾರಣ ಇದೇ ದಿನಾಂಕ 26ರಂದು ಗ್ರಾಮೀಣ ಭಾರತ ಬಂದ್ ಮಾಡುವ ಹೋರಾಟ ಮಾಡೋಣ ಎಂದರು.

ಸಭೆಯಲ್ಲಿ ಸಂಘದ ಗೌರವಾಧ್ಯಕ್ಷ ಹೆಚ್.ಕೆ. ಬಸವರಾಜಪ್ಪ, ಮಂಜುನಾಥ್‌ಗೌಡ್ರು, ರಾಜ್ಯ ಉಪಾಧ್ಯಕ್ಷ ಹೊನ್ನೂರು ಮುನಿಯಪ್ಪ, ಜಿಲ್ಲಾಧ್ಯಕ್ಷ ಮಲ್ಲಶೆಟ್ಟಿಹಳ್ಳಿ ಚನ್ನಬಸಪ್ಪ ಸಿದ್ಧವೀರಪ್ಪ ಈಚಗಟ್ಟ, ಚಿನ್ನಸಮುದ್ರ ಶೇಖರ ನಾಯ್ಕ ಸೇರಿದಂತೆ ಇತರರು ಇದ್ದರು.

### ಕೋಡಿಹಳ್ಳಿ ಅಧ್ಯಕ್ಷತೆಯ ಸಮಿತಿ ಸಭೆಯಲ್ಲಿ ನಿರ್ಧಾರ

**ಆಡಳಿತ ಚುಕ್ಕಾಣಿ ಹಿಡಿಯುವ ಯಾವುದೇ ರಾಷ್ಟ್ರೀಯ ಪಕ್ಷಗಳು ರೈತರ ಉಳಿಸುವಲ್ಲಿ ಗಟ್ಟಿ ನಿರ್ಧಾರಕ್ಕೆ ಬರುತ್ತಿಲ್ಲ. ಕೆಲ ರಾಜ್ಯಗಳಲ್ಲಿ ಬಿಜೆಪಿಯೇತರ ಸರ್ಕಾರಗಳು ಸ್ಪಂದಿಸುತ್ತಿವೆ. ಪ್ರಸ್ತುತ ಸರ್ಕಾರ ರೈತರ ಪರವಾಗಿಲ್ಲ. ಕಂಪನಿಗಳ ಸರ್ಕಾರಗಳಾಗಿವೆ. ಕೃಷಿ ಕ್ಷೇತ್ರ ಮತ್ತು ಹಕ್ಕನ್ನು ಉಳಿಸಿಕೊಳ್ಳಲು ಎಂತಹ ತ್ಯಾಗಕ್ಕೂ ಸಿದ್ದರಿರಬೇಕು. ನಮ್ಮ ಚಳುವಳಿಗೆ ತರ್ಕಗಳಲ್ಲೇ ಮುಳುಗುವ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಸಣ್ಣ ರೈತರೂ ಸಹ ತಮ್ಮ ಭೂಮಿ ಉಳಿಸಿಕೊಳ್ಳಲು ಆಗಲ್ಲ. ಜನರು ಬೀದಿಗೆ ಬೀಳುವ ಸ್ಥಿತಿ ಇದೆ. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಹೀಗೆ ರಾಜಕೀಯ ಪಕ್ಷಗಳ ಭಾಗ ಮಾಡಿ ಅವುಗಳ ಬೆಂಬಲಿಸುವ ರೈತರು ಮಾತ್ರ ಉಳಿಯುತ್ತಾರೆ. ಆದರೆ, ಸರ್ಕಾರದ ನೀತಿಗಳು ಇವರಿಗೂ ಮುಳುವಾಗಲಿದೆ. ಅದನ್ನು ಅರಿಯಬೇಕು.**
**- ಕೋಡಿಹಳ್ಳಿ ಚಂದ್ರಶೇಖರ್**




## ಕೇಂದ್ರ ಕಾಯ್ದೆ: ಪಂಜಾಬ್ ರೈತರ ಪ್ರತಿಭಟನೆ

**2,220 ಕೋಟಿ ರೂ. ನಷ್ಟ ರೈಲ್ವೆ ಸಚಿವಾಲಯ**

ನವದೆಹಲಿ, ನ. 20 – ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಪಂಜಾಬ್ ರೈತರು ನಡೆಸುತ್ತಿರುವ ರೈಲು ತಡೆಯಿಂದಾಗಿ 2,220 ಕೋಟಿ ರೂ.ಗಳ ನಷ್ಟವಾಗಿರುವುದಾಗಿ ರೈಲ್ವೆ ಸಚಿವಾಲಯ ತಿಳಿಸಿದೆ.

ಸೆಪ್ಟೆಂಬರ್ 24ರಿಂದ ಆರಂಭವಾದ ಪ್ರತಿಭಟನೆಗಳಿಂದಾಗಿ 3,850 ಸರಕು ಸಾಗಣೆ ರೈಲುಗಳ ಕಾರ್ಯ ನಿರ್ವಹಣೆ ಸಾಧ್ಯವಾಗಿಲ್ಲ. 2,352 ಪ್ರಯಾಣಿಕರ ರೈಲುಗಳನ್ನು ಇದುವರೆಗೂ ರದ್ದುಗೊಳಿಸಲಾಗಿದೆ ಇಲ್ಲವೇ ಮಾರ್ಗ ಬದಲಿಸಲಾಗಿದೆ.

ರಾಜ್ಯದಲ್ಲಿ ಸರಕು ಸಾಗಣೆ ರೈಲುಗಳಿಗಷ್ಟೇ ಅವಕಾಶ ನೀಡುವುದಾಗಿ ಪ್ರತಿಭಟನೆ ನಡೆಸುತ್ತಿರುವ ರೈತರು ಪಟ್ಟು ಹಿಡಿದಿದ್ದಾರೆ. ಪಂಜಾಬ್ ಸರ್ಕಾರ ರೈಲುಗಳಿಗೆ ರಕ್ಷಣೆ ನೀಡುವ ಬದ್ಧತೆ ವ್ಯಕ್ತಪಡಿಸಿದರೆ ಮಾತ್ರ ರೈಲುಗಳನ್ನು ಓಡಿಸುವುದಾಗಿ ಸಚಿವಾಲಯ ತಿಳಿಸಿದೆ. ಪ್ರಯಾಣಿಕರ ರೈಲುಗಳ ರದ್ದತಿಯಿಂದ 67 ಕೋಟಿ ರೂ. ನಷ್ಟವಾಗಿದೆ. ಒಟ್ಟಾರೆ ನಷ್ಟ 2,220 ಕೋಟಿ ರೂ. ಎಂದು ರೈಲ್ವೆ ಹೇಳಿದೆ.

ಪಂಜಾಬ್ ರಾಜ್ಯವು ಉತ್ತರ ರೈಲ್ವೆ ವಲಯದಲ್ಲಿ ಬರಲಿದೆ. ಈ ವಲಯ ಪ್ರತಿದಿನ 14.85 ಕೋಟಿ ರೂಗಳಂತೆ 891 ಕೋಟಿ ರೂ.ಗಳ ನಷ್ಟಕ್ಕೆ ಗುರಿಯಾಗಿದೆ. ಪಂಜಾಬ್‌ನಲ್ಲಿ ರೈಲ್ವೆ 230 ಸರಕು ತುಂಬಿರುವ ಬೋಗಿಗಳು ಸಿಲುಕಿವೆ. ಇದರಲ್ಲಿ ಕಲ್ಲಿದ್ದಲು, ರಸಗೊಬ್ಬರ, ಸಿಮೆಂಟ್ ಹಾಗೂ ಪೆಟ್ರೋಲ್ ಸೇರಿದಂತೆ ಹಲವು ಉತ್ಪನ್ನಗಳಿವೆ.

## ಜ. 26ರಂದು ನೂತನ ರೈಲ್ವೆ ಕಟ್ಟಡ ಉದ್ಘಾಟನೆ



ಸಂಸದ ಜಿ.ಎಂ. ಸಿದ್ದೇಶ್ವರ ಅವರು ಡಿ.ಸಿ.ಎಂ. ಲೇಔಟ್ ಬಳಿಯ ರೈಲ್ವೆ ಕೆಳ ಸೇತುವೆಯ ಕಾಮಗಾರಿ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ಎಸ್.ಟಿ. ವೀರೇಶ್, ರೈಲ್ವೆ ಹಾಗೂ ನಗರ ಪಾಲಿಕೆಯ ಅಧಿಕಾರಿಗಳು ಉಪಸ್ಥಿತರಿದ್ದರು.

(1ನೇ ಪುಟದಿಂದ) ಸಿದ್ದೇಶ್ವರ ವಿವರಿಸಿದ್ದಾರೆ. ಡಿಸಿಎಂ ಲೇಔಟ್ ಬಳಿಯ ರೈಲ್ವೆ ಕೆಳ ಸೇತುವೆ ಕಾಮಗಾರಿ ಅಂತಿಮ ಹಂತಕ್ಕೆ ತಲುಪಿದೆ. ಡಿಸೆಂಬರ್ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದವರು ಹೇಳಿದ್ದಾರೆ.

ತೋಳಹುಣಸೆಯಲ್ಲಿ ಮೇಲ್ಸೇತುವೆ ನಿರ್ಮಾಣವಾದ ನಂತರ ರೈಲ್ವೆ ಗೇಟ್ ಬಂದ್ ಮಾಡಲಾಗಿದೆ. ಇದರಿಂದಾಗಿ ಸಾರ್ವಜನಿಕರ ಸಂಚಾರಕ್ಕೆ ಸಮಸ್ಯೆಯಾಗಿದೆ. ಈ ಸಮಸ್ಯೆ ನೀಗಿಸಲು ಕ್ರಮ ತೆಗೆದುಕೊಳ್ಳಬೇಕೆಂದು ರೈಲ್ವೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಸಂಸದರು ಹೇಳಿದರು.

ದಾವಣಗೆರೆ - ಚಿತ್ರದುರ್ಗ - ತುಮಕೂರು ನೇರ ರೈಲ್ವೆ ಮಾರ್ಗಕ್ಕೆ 226 ಎಕರೆ ಜಾಗ ವಶಪಡಿಸಿಕೊಳ್ಳುವ ಪ್ರಕ್ರಿಯೆ ಅಂತಿಮ ಹಂತಕ್ಕೆ ಬಂದಿದೆ. ತಿಂಗಳಲ್ಲೇ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. 26 ಎಕರೆಯನ್ನು ಹೆಚ್ಚುವರಿಯಾಗಿ ವಶಪಡಿಸಿಕೊಳ್ಳಲೂ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದವರು ತಿಳಿಸಿದರು.

ಈ ಸಂದರ್ಭದಲ್ಲಿ ಪಾಲಿಕೆ ಮೇಯರ್ ಬಿ.ಜಿ. ಅಜಯ್ ಕುಮಾರ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಇತರರಿದ್ದರು.

### ಹೊಸ ಉಪ ವಿಭಾಗಾಧಿಕಾರಿ ಕಚೇರಿಗೆ 5 ಕೋಟಿ ರೂ. ಬಿಡಗಡೆ: ಸಿದ್ದೇಶ್ವರ್


**ಬಾತಿ ಬಳಿ ಸಾಫ್ಟ್‌ವೇರ್ ಪಾರ್ಕ್**

ಹೊಸ ಉಪ ವಿಭಾಗಾಧಿಕಾರಿಗಳ ಕಚೇರಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು 5 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹೊಸ ಉಪ ವಿಭಾಗಾಧಿಕಾರಿ ಕಚೇರಿ ನಿರ್ಮಿಸಲಾಗುವುದು. ರೈಲ್ವೆ ನಿಲ್ದಾಣದ ಎದುರು ಹಾಲಿ ಇರುವ ಉಪವಿಭಾಗಾಧಿಕಾರಿ ಕಚೇರಿಯ ಜಾಗವನ್ನು ರೈಲ್ವೆ ಇಲಾಖೆಗೆ ನೀಡಲಾಗುವುದು ಎಂದವರು ಹೇಳಿದ್ದಾರೆ. ಬಾತಿ ಹತ್ತಿರ ರೈಲ್ವೆ ಇಲಾಖೆಯು 3.2 ಎಕರೆ ಜಮೀನು ನೀಡಲಿದ್ದು, ಇದರಲ್ಲಿ 2 ಎಕರೆ ಜಾಗವನ್ನು ಸಾಫ್ಟ್‌ವೇರ್ ಪಾರ್ಕ್ ನಿರ್ಮಾಣಕ್ಕೆ ಬಳಸಿಕೊಳ್ಳಲಾಗುವುದು. ವಾರದಲ್ಲೇ ಈ ಬಗ್ಗೆ ಒಪ್ಪಂದ ಮಾಡಿಕೊಳ್ಳಲಾಗುವುದು ಎಂದೂ ಅವರು ತಿಳಿಸಿದರು.

## ಕನ್ನಡ ಜಾಗೃತಿ ಸಮಿತಿಗೆ ಐವರ ನೇಮಕ



ದಾವಣಗೆರೆ, ನ. 20- ಜಿಲ್ಲಾ ಕನ್ನಡ ಜಾಗೃತಿ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ಎನ್.ಟಿ. ಯರ್ರಿಸ್ವಾಮಿ, ಪ್ರೊ. ಹೆಚ್.ಎ. ಭಿಕ್ಷಾವರ್ತಿಮಠ, ಎಸ್.ಎಸ್. ಸಿದ್ದರಾಜು, ದೇವಿಕ ಸುನಿಲ್, ಹೆಚ್.ಕೆ. ಸತ್ಯಭಾಮ ಮಂಜುನಾಥ್ ಅವರುಗಳನ್ನು ನೇಮಕ ಮಾಡಿ ಸರ್ಕಾರ ಆದೇಶಿಸಿದೆ.

## ಮಾಲಿನ್ಯ : ಗೋವಾಗೆ ತೆರಳಿದ ಸೋನಿಯಾ

ನವದೆಹಲಿ, ನ. 20 – ತೀವ್ರ ಮಾಲಿನ್ಯವಿರುವ ರಾಜಧಾನಿ ದೆಹಲಿಯಿಂದ ದೂರ ಇರುವಂತೆ ವೈದ್ಯರು ಸಲಹೆ ನೀಡಿರುವ ಕಾರಣ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಗೋವಾಗೆ ತೆರಳಿದ್ದಾರೆ.


**ಸಿಂಗ್ರಿಹಳ್ಳಿ ಗ್ರಾಮದ ಈ. ಶೇಖರಪ್ಪ ನಿಧನ**



ಜನನ : 20.10.1948 ಮರಣ : 20.11.2020

ಸಿಂಗ್ರಿಹಳ್ಳಿ ಗ್ರಾಮದ ದಿ|| ಶ್ರೀಮತಿ ಹೂವಮ್ಮ ಮತ್ತು ದಿ|| ವೆಂಕಪ್ಪನವರ ಮಗನಾದ

**ಶ್ರೀ ಈ. ಶೇಖರಪ್ಪ**

ಅವರು ದಿನಾಂಕ 20.11.2020ರ ಶುಕ್ರವಾರ ಬೆಳಿಗ್ಗೆ 10.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 21.11.2020ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಸಿಂಗ್ರಿಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.

ದುಃಖಿತಪ್ತ ಕುಟುಂಬ ವರ್ಗ
ಶ್ರೀಮತಿ ಕಸ್ತೂರಮ್ಮ ಮತ್ತು ಮಕ್ಕಳು
ಈಡಿಗರ ವಂಶಸ್ಥರು, ಸಿಂಗ್ರಿಹಳ್ಳಿ ಗ್ರಾಮಸ್ಥರು.



||ಶ್ರೀ ಬಸವೇಶ್ವರ ಪ್ರಸನ್ನ||

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ಜಿಲ್ಲೆ, ಚನ್ನಗಿರಿ ತಾ|| ಕತ್ತಲಗೆರೆ ಗ್ರಾಮದ ವಾಸಿ
ದಿ|| ಶ್ರೀ ಅರೇಹಳ್ಳಿ ಗೌಡ್ರ ಆನಂದಪ್ಪನವರ ಧರ್ಮಪತ್ನಿ
ಶ್ರೀಮತಿ ಬಸಮ್ಮ ಮತ್ತು ಮಕ್ಕಳು
ಮಾಡುವ ವಿಜ್ಞಾಪನೆಗಳು.
ದಿನಾಂಕ ; 14.11.2020ನೇ ಶನಿವಾರ ಬೆಳಿಗ್ಗೆ 10.04ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಅರೇಹಳ್ಳಿ ಗೌಡ್ರ ಆನಂದಪ್ಪ**

ಇವರು ಶಿವಾಧೀನರಾದ ಪ್ರಯುಕ್ತ ತತ್ಸಂಬಂಧ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ : 22.11.2020ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಗಂಟೆಗೆ ಕತ್ತಲಗೆರೆ ಗ್ರಾಮ ಮೃತರ ಸ್ವಗೃಹದಲ್ಲಿ
ನಡೆಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖ ತಪ್ತರು :
ಪತ್ನಿ: ಶ್ರೀಮತಿ ಬಸಮ್ಮ
ಮಕ್ಕಳಾದ: ಜಿ.ಎ. ಶಾಂತಕುಮಾರ್, ಜನರಲ್ ಮ್ಯಾನೇಜರ್, ವಿಕಾಸ್ ಬಿಲ್ಡ್ ಕಾನ್ಸ್, ಬೆಂಗಳೂರು
ಜಿ.ಎ. ಪ್ರಕಾಶ್, ಸಿಇಒ, ಇಂಡಿಯನ್ ಕೇನ್ ಪವರ್ ಪ್ಲಾಂಟ್ ಲಿಮಿಟೆಡ್., ಮುಧೋಳ
ಜಿ.ಎ. ಧನ್ಯಕುಮಾರ್, ಗ್ರೂಪ್ ಲೀಡರ್, ಟೊಯೋಟೊ, ಬೆಂಗಳೂರು.
ಜಿ.ಎ. ಸಂದೇಶ್, ಅಗ್ರಿಕಲ್ಚರಿಸ್ಟ್
ಸೊಸೆಯಂದಿರು, ಮೊಮ್ಮಕ್ಕಳು, ಅರೇಹಳ್ಳಿ ಗೌಡ್ರು ವಂಶಸ್ಥರು, ಕತ್ತಲಗೆರೆ ಗೌಡ್ರು ವಂಶಸ್ಥರು, ಕತ್ತಲಗೆರೆ.
ಫೋ. : 99168 33235, 9481691842

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte